SECOND

BOOK OF LESSONS

IN CANARESE

ಬಾಲಕರ ಕನ್ನಡ ಪಾಠಗಳ

ಎರಡನೇ

ಪುಸ್ತಕವು

FOR THE USE OF GOVERNMENT CANARESE SCHOOLS IN THE SOUTHERN DIVISION OF THE BOMBAY PRESIDENCY

FOURTH EDITION, REVISED

MANGALORE
PRINTED FOR THE EDUCATIONAL DEPARTMENT
BY STOLZ & REUTHER, BASEL MISSION PRESS
1868

SECOND

BOOK OF LESSONS

IN CANARESE

FOR THE USE OF GOVERNMENT CANARESE SCHOOLS
IN THE SOUTHERN DIVISION OF THE BOMBAY PRESIDENCY

BY

VIRABHADRA M. PANDITA.

FOURTH EDITION, REVISED

MANGALORE
PRINTED FOR THE BOMBAY EDUCATIONAL DEPARTMENT
BY STOLZ & REUTHER, BASEL MISSION PRESS
1868

ಬಾಲಕರ

ಕನ್ನಡ ಪಾಠಗಳ ಎರಡನೇ

ಪುಸ್ತಕ

ಮುಂಬಯಿ ಸಂಸ್ಥಾನದೊಳಗಿನ ದಕ್ಷಿಣ ತುಕಡಿಯಲ್ಲಿರುವ ಸರಕಾರದ
ಕನ್ನಡ ಸಾಲೆಗಳಿಗಾಗಿ ವೀರಭದ್ರ ಮಡಿವಾಳಯ್ಯ ಪಂಡಿತ ಮಾಡಿದ್ದು

ನಾಲ್ಕನೇ ಛಾಪೆ, ತಿದ್ದಿದ್ದು

ಮಂಗಳೂರು
ಮುಂಬಯಿ ವಿದ್ಯಾವೃದ್ಧಿ ಸಂಘದವರಿಗಾಗಿ ಬಾಸೆಲ್ ಮಿಶನ್
ಛಾಪಖಾನೆಯಲ್ಲಿ ಛಾಪಿಸಿದ್ದು
೧೮೬೮

ಸೂಚನೆ.

ಈ ಚಿಕ್ಕ ಪುಸ್ತಕವು ಮೊದಲು ಸಾರಿ ಸನ್ ೧೮೬೩ನೇ ಇಸವಿಯಲ್ಲಿ ಮಿ. ಲೆಸ್ಟರ ಧೊರೆಯವರ ಅಪ್ಪಣೆಯಿಂದ ಮುದ್ರಿಸಲ್ಪಟ್ಟಿತು. ಅಂದಿನಿಂದ ಈ ಐದು ವರ್ಷಗಳ ವರಿಗೆ ಇದನ್ನು ಶುದ್ಧ ಮಾಡುವ ಕೆಲಸ ನಡಿಯುತ್ತ ಬಂದಿದ್ದರೆ, ಇದು ಇಂದಿಗೆ ಬಹಳ ಚನ್ನಾಗಿ ಶುದ್ಧವಾಗುತಿತ್ತು. ಹಾಗೆ ಆಗದೆ ಈ ದಿವಸದ ವರಿಗೆ ಮೊದಲನೇ ಆವೃತ್ತಿಯಂತೆ ಮತ್ತು ಎರಡು ಸಾರಿ ಮುದ್ರಿಸಲ್ಪಟ್ಟಿತು. ಈ ಸಾರಿ ಇದು ಮಿ. ರಸಲ್ ಧೊರೆಯವರ ಅಪ್ಪಣೆಯಿಂದ ತಿದ್ದಲ್ಪಟ್ಟದೆ.

ಈ ಛಾಪೆಯಲ್ಲಿ ೧೫ನೇ ಪಾಠ ತೆಗೆದು, ಅದಕ್ಕೆ ಬದಲಾಗಿ ಮತ್ತೊಂದು ಹಳೆ ಕವಿತ್ವ ಹಾಕಿಯದೆ. ಮತ್ತು ಕೆಲವು ಹಸ್ತದೋಷ ಮುಂತಾದವುಗಳನ್ನು ತಿದ್ದಿಯದೆ.

ಈ ಪುಸ್ತಕದಲ್ಲಿ ಇನ್ನು ಎಷ್ಟೋ ತಪ್ಪುಗಳು ಉಳಿದವೆ; ಆದರೆ ಅವೆಲ್ಲಾ ಶುದ್ಧವಾಗುವದು ಒಂದು ದಿವಸದ ಅಥವಾ ಒಂದು ಛಾಪೆಯ ಕೆಲಸವಲ್ಲಾ. ಪ್ರತಿ ದಿವಸ ಕಲಿಸುವ ಉದ್ಯೋಗವನ್ನು ಮಾಡುವವರಿಗಾಗಲಿ ಬೇರೆಯವರಿಗಾಗಲಿ ಇದರೊಳಗಿನ ತಪ್ಪುಗಳು ದೃಷ್ಟಿಗೆ ಬಿದ್ದರೆ, ಅವರು ಅವುಗಳನ್ನು ಕೆಳಗೆ ಸಹಿ ಮಾಡಿದವನ ಕಡಿಗೆ ಅಥವಾ ಬೆಳಗಾವಿ ಜಿಲ್ಲೆಯ ಡಿಪ್ಯುಟಿ ಇನ್ಸಪೆಕ್ಟರರಾದ ಮಹಾರಾಜಶ್ರೀ ಚನ್ನಬಸಪ್ಪನವರ ಕಡಿಗೆ ದಯ ಮಾಡಿ ಬರಿದು ಕಳುಹಿಸಿದರೆ, ಅವರ ಉಪಕಾರವೆಣಿಸಲಾದೀತು.

ವೀರಭದ್ರ ಮಡಿವಾಳಯ್ಯ ಪಂಡಿತ.

ಚಿಕ್ಕೋಡಿ, ೩೦ನೆ ಜೂನ್ ೧೮೬೮.

CONTENTS.

I. Animals.

II Vegetables.

III. Minerals.

IV. Fables.

ಪಾಠದ ವಿಷಯಗಳು.

೧. ಮೃಗವರ್ಣನೆಗಳು.

೨. ವೃಕ್ಷವರ್ಣನೆಗಳು.

೩. ಧಾತುವರ್ಣನೆಗಳು.

೪. ಕಥೆಗಳು.

ಅನುಕ್ರಮಣಿಕೆ.

SECOND

BOOK OF LESSONS


IN CANARESE.

ಬಾಲಕರ ಕನ್ನಡ ಪಾಠಗಳ

ಎರಡನೇ ಪುಸ್ತಕ.

I. The New Book.

೧. ಹೊಸ ಪುಸ್ತಕ.



ಭಾಮಿನಿ.

ಬಾಲಕರೆ, ನಿಂಮೊದಲ ಪುಸ್ತಕ
ಸಾಲ್ಯೊಳೋದಿದಿರಲ್ಲವದರೊಳ
ಧೂಳಿನಕ್ಷರ, ಶಬ್ದ, ನುಡಿ, ಕಥೆ, ನೀತಿ, ಪಶುವಿವರ, ||
ಮೇಲೆ ಸುಕವಿತೆ ಪಾಠದೊಳಗಿನ
ಕೀಲವನು ನೀವರಿತು, ಬೇಗ ಸು—
ಶೀಲರೆಂಬುವ ಪೆಸರು, ಮಿತ್ರರೆ, ಪಡಿದು ಕೊಂಡಿಹರೀ. || ೧ ||

ಎಳಿಯ ಹುಡುಗರೆ, ನೀವು ಕೇಳೀ
ಸುಲಭ ಪುಸ್ತಕ ನಿಮ್ಮಗೋಸ್ಕರ
ಬಲು ಶ್ರಮದಿ ನಾವಿರಚಿಸಿಹೆನೀಗತಿ ಮಮತೆಯಿಂದ; ||
ಗೆಳಿಯರೆಲ್ಲರು ಕೂಡಿ, ನೀವೀ
ಚಲುವ ಪುಸ್ತಕವನ್ನು ಕಲಿತಿದ
ರೊಳಗೆ ಬರಿದದ್ದೆಲ್ಲ ತಿಳಿಯಲು, ಜಾಣರಾಗುವಿರೀ. || ೨ ||

2. Conduct of a Schoolboy.

೨. ಹುಡುಗರ ನಡತೆ.

ಭಾಮಿನಿ.

ಬಲು ಬೆಳಿಗಿನೊಳೆದ್ದು, ಹಿರಿಯರ
ಚಲುವ ಪದಯುಗಗಳಿಗೆ ಭಕ್ತಿಯೊ—
ಳೊಲಿದು ವಂದಿಸಿ, ಮುಂದೆ ಸಾಲಿಗೆ ಸಿದ್ಧವಾಗುವದು; ||
ಕೆಲಬಲದೊಳಿರುತಿರುವ ತಮ್ಮಯ
ಸಲುಗೆ ಬಾಲರ ಕೂಡಿ, ತೀವ್ರದಿ
ಕಲಿಯ ಪೋಗುವದಿನ್ನು ದಾರಿಯೊಳೆಲ್ಲಿ ನಿಲ್ಲದಲೆ. || ೧ ||

ಹರುಷದಿಂದಲಿ ಪರಮ ಗುರುವಿನ
ಚರಣ ಸರಸಿಜಕೆರಗಿ, ತಮ್ಮಯ
ಕರದಿ ಪುಸ್ತಕವಿರಿಸಿ, ಕುಳಿತಾದರದಿ ಪಾಠವನು ||
ಉರೆಗಲಿತು, ಸತ್ವರದಿ ಸಾಲೆಯ
ಧೊರೆಯೊಳೊಪ್ಪಿಸಿ, ನೆರೆ ಮಮತೆಯನು
ದೊರಕಿಸಲಿ ಬೇಕುರುತರದ ಸುಕುವರಗಳೆಂದೆನಿಸಿ. || ೨ ||

3. The Newfoundland Dog.

೩. ನ್ಯೂಫೌಂದಲಂದ ನಾಯಿ.



ಮೇಲಿನ ಚಿತ್ರದಲ್ಲಿ ತೋರಿಸಿದ ಜಾತಿಯ ನಾಯಿಗಳು ಅಮೇರಿಕ ಖಂಡದ ಉತ್ತರಕ್ಕೆ ಇರುವ ನ್ಯೂಫೌಂದಲಂದ ಎಂಬ ಹೆಸರಿನ ದೇಶದೊಳಗೆ ಅವೆ. ಅವುಗಳ ಆಕಾರ ಬಹು ಮನೋಹರವಾದದ್ದು. ಅಲ್ಲಿಯ ನಿವಾಸಿಗಳಿಗೆ ಅವು ಬಹು ಉಪಯೋಗವುಳ್ಳವಾಗಿವೆ. ಅವರು ಅವನ್ನು ಬಂಡಿಗಳಿಗೆ ಹೂಡಿ, ಗುಡ್ಡದೊಳಗಿಂದ ಕಟ್ಟಿಗೆಗಳನ್ನು ತೆಗದು ಕೊಂಡು ಬರುತ್ತಾರೆ. ಮೂರು ನಾಲ್ಕು ನಾಯಿಗಳನ್ನು ಬಂಡಿಗೆ ಹೂಡಿದರೆ, ಬಂಡಿ ಹೊಡಿಯುವವನು ಸಹ ಬೇಡ, ತಾವೇ ಎಳಿದು ಕೊಂಡು ಬರುತ್ತವೆ. ಮತ್ತು ಬಂಡಿಯನ್ನು ತೆರವು ಮಾಡಿದ ಬಳಿಕ, ತಿರಿಗಿ ಗುಡ್ಡಕ್ಕೆ ಎಳದು ಕೊಂಡು ಹೋಗುತ್ತವೆ. ತಿನ್ನಲಿಕ್ಕೆ ಏನಾದರೂ ಕೊಟ್ಟರೆ ಆಯಿತು, ತಿಂದು ಕೊಂಡು ತೃಪ್ತಿಯಾಗಿರುತ್ತವೆ. ಅವುಗಳಿಗೆ ನೀರೊಳಗೆ ಈಸುವದಕ್ಕೆ ಬಹಳ ಚನ್ನಾಗಿ ಬರುತ್ತದೆ. ಕೂಸುಗಳು ನೀರೊಳಗೆ ಬಿದ್ದು ಮುಳುಗುತ್ತಿದ್ದರೆ, ಈ ಜಾತಿಯ ನಾಯಿಯನ್ನು ಬಿಟ್ಟರೆ ತಕ್ಷಣಕ್ಕೆ ಹೋಗಿ, ಕೂಸಿಗೆ ನೋಯದ ಹಾಗೆ ಬಾಯಿಯೊಳಗೆ ಹಿಡಿದು ಕೊಂಡು ಬರುತ್ತವೆ.

4. The Cow tree.

೪. ಗೋವೃಕ್ಷ.

ಗೋವೃಕ್ಷವೆಂಬ ಹೆಸರಿನ ಗಿಡವು ಅಮೇರಿಕ ಖಂಡದೊಳಗೆ ದೊರಿಯುತ್ತದೆ. ಅದರೊಳಗಿಂದ ಆಕಳ ಹಾಲಿನಂಥ ಹಾಲು ಬರುತ್ತದೆ. ಆ ಹಾಲಿನ ರುಚಿಯು ಆವಿನ ಹಾಲಿನಂತೆ ಇರುತ್ತದೆಂದು, ಅದಕ್ಕೆ ಗೋವೃಕ್ಷವೆಂಬ ಹೆಸರು ಬಿದ್ದದೆ. ಅಮೇರಿಕ ಖಂಡದೊಳಗಿನ ಬಡ ಬಗ್ಗರು ಈ ಗಿಡದ ಮೇಲೆ ತಮ್ಮ ಚರಿತಾರ್ಥ ಸಾಗಿಸುತ್ತಾರೆ. ಅವರು ಅದರ ಹಾಲಿನ ಸಂಗಡ ರೊಟ್ಟಿಯನ್ನು ತಿನ್ನುತ್ತಾರೆ. ಆ ಗಿಡವು ಕಲ್ಲು ಭೂಮಿಯಲ್ಲಿ ಬೆಳಿಯುತ್ತದೆ. ಸೂರ್ಯೋದಯದ ಕಾಲದಲ್ಲಿ ಆ ಗಿಡಕ್ಕೆ ಚೂರಿಯಿಂದ ಕಚ್ಚು ಹಾಕಿದರೆ, ಒಳಗಿಂದ ಶುಭ್ರವಾದ ಹಾಲು ಹೊರಡುತ್ತದೆ. ಬಡ ಜನರು ಪ್ರಾತಃಕಾಲಕ್ಕೆ ಎದ್ದು, ಪಾತ್ರೆಯನ್ನು ತೆಗದು ಕೊಂಡು, ಆ ಗಿಡದ ಹತ್ತರ ಹೋಗಿ, ತಮ್ಮ ಮಕ್ಕಳ ಮರಿಗಳ ದೆಸೆಯಿಂದ ಹಾಲು ತೆಗೆದು ಕೊಂಡು ಬರುತ್ತಾರೆ. ಆ ಗಿಡದ ಹಾಲಿನಿಂದ ಏನು ಅಪಾಯವಾಗುವದಿಲ್ಲ.

ಆ ವೃಕ್ಷವು ಕಣ್ಣಿಗೆ ಬಹು ಚಂದವಾದದ್ದು. ಅದರ ಜಾತಿಯ ಗಿಡಗಳು "ಕಾರಡಿಲೇರ" ಎಂಬ ಹೆಸರುಳ್ಳ ಪರ್ವತದ ಬುಡದಲ್ಲಿ ಬಹಳ. ಆ ದೇಶದಲ್ಲಿ ಮಳೆ ಬಹಳವಾಗಿ ಬೀಳುವದಿಲ್ಲವಾದ ಕಾರಣ, ಆ ಗಿಡದ ಎಲೆಗಳೂ ಕೊಂಬೆಗಳೂ ಯಾವಾಗಲೂ ಒಣಗಿದಂತೆ ಕಾಣುತ್ತವೆ. ಆದರೂ ಸ್ವಲ್ಪ ಕಚ್ಚು ಹಾಕಿದರಾಯಿತು, ಹಾಲು ಸುರಿಯಲಾರಂಭಿಸುತ್ತದೆ. ಉಳಿದ ಕಾಲಕ್ಕಿಂತ ಸೂರ್ಯೋದಯದ ಕಾಲಕ್ಕೆ ಹಾಲು ಬಹಳ ಹೊರಡುತ್ತದೆ.



5. Gold.

೫. ಭಂಗಾರ.



ಭೂಮಿಯೊಳಗಿಂದ ಅಗಿದು ತೆಗಿಯಲ್ಪಡುವ ಎಲ್ಲ ಧಾತುಗಳಲ್ಲಿ ಒಂದರ ಹೊರ್ತು ಭಂಗಾರವು ಬಹು ಜಡವಾದದ್ದು. ಯಾವದಾದರೊಂದು ಸಣ್ಣ ಡಬ್ಬಿಯನ್ನು ತೆಗದು ಕೊಂಡು, ಅದರ ತುಂಬ ಒಮ್ಮೆ ನೀರು, ಒಮ್ಮೆ ಭಂಗಾರ ಈ ಪ್ರಕಾರ ಹಾಕಿ, ಅದರೊಳಗೆ ಹಿಡಿಯುವ ನೀರನ್ನು ಭಂಗಾರವನ್ನು ಬೇರೆ ಬೇರೆ ತೂಕ ಮಾಡಿ ನೋಡಿದರೆ, ಆ ನೀರಿಗಿಂತ ಆ ಭಂಗಾರವು ಹತ್ತೊಂಭತ್ತು ಪಾಲು ಜಡವಾಗಿದೆಂಬದಾಗಿ ಕಾಣುವದು. ಭಂಗಾರವು ಹಿಂದುಸ್ಥಾನ, ಔಸ್ತ್ರಾಲ್ಯ, ಮತ್ತು ಅಮೇರಿಕ

ಖಂಡಗಳಲ್ಲಿ ಬಹಳವಾಗಿ ದೊರಿಯುತ್ತದೆ. ಶುದ್ಧ ಭಂಗಾರವು ಎಲ್ಲಿಯೂ ದೊರಿಯುವದಿಲ್ಲ. ಜನರು ಖಣಿಯೊಳಗಿಂದ ಭಂಗಾರದ ಮಣ್ಣು ಅಗಿದು ತೆಗಿದು, ಅದನ್ನು ಚನ್ನಾಗಿ ಪುಡಿ ಮಾಡಿ, ಅದರೊಳಗೆ ಪಾದರಸ ಹಾಕುತ್ತಾರೆ. ಅದರಿಂದ ಮಣ್ಣೆಲ್ಲ ಒಂದು ಕಡಿಗೆ ಆಗಿ, ಭಂಗಾರವೂ ಪಾದರಸವೂ ಕೂಡಿ ಒಂದು ಕಡಿಗೆ ಮುದ್ದೆ ಆಗಿ ಬೀಳುತ್ತದೆ. ಆ ಮೇಲೆ ಆ ಮುದ್ದೆಯನ್ನು ಶಿಕೆಯ ಮೇಲೆ ಇಟ್ಟರೆ, ಪಾದರಸವೆಲ್ಲ ಹಾರಿ ಹೋಗಿ, ಶುದ್ಧ ಭಂಗಾರವೇ ಉಳಿಯುತ್ತದೆ. ಒಂದು ಗುಂಜಿತೂಕ ಭಂಗಾರದೊಳಗೆ ಅಂಗುಲ ಉದ್ದ ಅಂಗುಲ ಅಗಲ ಪತ್ರಗಳು ಅರವತ್ತು ಆಗುತ್ತವೆ.

6. The Covetous Man.

೬. ಲೋಭಿಯು.

ಒಬ್ಬಾನೊಬ್ಬ ಲೋಭಿಯು ಬಹಳ ಹಣವನ್ನು ಸಂಪಾದಿಸಿದನು. ಅವನು, ಅದನ್ನು ಮನೆಯಲ್ಲಿಟ್ಟರೆ ಯಾರಾದರು ಕದ್ದು ಕೊಳ್ಳುವರೆಂಬ ಭಯದಿಂದ, ಊರ ಹೊರಗೆ ಒಂದು ಹೊಲದಲ್ಲಿ ಹೂಳಿಟ್ಟು, ನಿತ್ಯ ಎರಡು ಬಾರಿ ಹೋಗಿ, ಹೂಳಿದ ಸ್ಥಳವನ್ನು ನೋಡಿ, ಬಹು ಸಂತೋಷ ಪಡುತ್ತಿದ್ದನು. ಹೀಗೆ ಇರಲಾಗಿ ಅವನ ಆಳು, ತನ್ನ ಧನಿಯು ಪ್ರತಿ ದಿವಸ ಆ ಸ್ಥಳಕ್ಕೆ ಹೋಗಿ ಬರುತ್ತಾನೆ, ಅಲ್ಲಿ ಏನಾದರೂ ವಿಶೇಷವಾದದ್ದಿರ ಬೇಕೆಂದು ಸಂಶಯ ಪಟ್ಟು, ಅಲ್ಲಿ ಹೋಗಿ ಅಗಿದು ನೋಡಲಾಗಿ, ಒಂದು ಹಣದ ಕೊಡ ಹೊರಟಿತು. ಅದನ್ನು ತೆಗೆದು ಕೊಂಡು, ಅವನು ಓಡಿ ಹೋದನು. ಮರು ದಿವಸ ಬೆಳಗಾದ ಮೇಲೆ ಲೋಭಿಯು ಹೋಗಿ ನೋಡಲಾಗಿ, ದ್ರವ್ಯವಿರಲಿಲ್ಲ. ಆದ ಕಾರಣ ಅವನು ತಲೆಯ ಮೇಲೆ ಬೂದಿ ಹಾಕಿ ಕೊಂಡು, ಎದೆ ಎದೆ ಬಡಿದು ಕೊಳ್ಳುತ್ತ, ದುಃಖದಿಂದ ಅದೇ ಸ್ಥಳದಲ್ಲಿ ಅಳುತ್ತ ಕೂತಿರಲಾಗಿ, ಅವನ ನೆರೆಮನೆಯವನು ಈ ವೃತ್ತಾಂತವನ್ನು ಕೇಳಿ, ಅಲ್ಲಿಗೆ ಬಂದು, ಇದೇನೆನುತ ಕೇಳಲಾಗಿ, ಲೋಭಿಯು ತನ್ನ ಸಂಗತಿಯನ್ನೆಲ್ಲ ವಿಸ್ತರಿಸಿ ಹೇಳಿದನು. ಆಗಲಾ ಗೃಹಸ್ಥನು

ಅವನನ್ನು ನೋಡಿ, "ಅಪ್ಪಾ, ನಿನ್ನ ಒಡವೆ ಏನು ಹೋದ ಹಾಗೆ ತೋರುವದಿಲ್ಲ; ನೀನು ಮನಸ್ಸಿನಲ್ಲಿ ದ್ರವ್ಯ ಹೋಯಿತೆಂದು ಶೋಕ ಪಡದೆ, ಈ ಸ್ಥಳಕ್ಕೆ ನಿತ್ಯದಲ್ಲಿ ಹ್ಯಾಗೆ ಬಂದು ನೋಡುತ್ತಿದ್ದಿಯೋ, ಹಾಗೆಯೇ ನೋಡುತ್ತ ಇರು; ಅಷ್ಟರಿಂದಲೇ ನಿನಗೆ ತೃಪ್ತಿ" ಎಂದು ಹೇಳಿದನು. ಆದ ಕಾರಣ ಲೋಭಿಗಳ ದ್ರವ್ಯವನ್ನು ಕಳ್ಳರೂ ಸುಳ್ಳರೂ ತಿಂದು ಬಿಡುತ್ತಾರೆ.

7. Conduct towards Relations.

೭. ಬಂಧುಬಳಗದವರ ಕೂಡ ಹ್ಯಾಗೆ ನಡಿದು ಕೊಳ್ಳ ತಕ್ಕದ್ದು.

ನಮ್ಮ ಬಂಧು ಬಳಗದವರೆಲ್ಲರ ಕೂಡ, ಮುಖ್ಯವಾಗಿ ತಂದೆ ತಾಯಿ, ಅಕ್ಕ ತಂಗಿ, ಅಣ್ಣ ತಮ್ಮಂದಿರ ಕೂಡ, ನಾವು ಬಹು ಪ್ರೀತಿಯಿಂದ ಇರಬೇಕು. ನಮ್ಮ ತಂದೆ ತಾಯಿಗಳು ನಾವು ಚಿಕ್ಕವರಾಗಿರುವಾಗ ನಮ್ಮನ್ನು ಬಹು ಪ್ರಯಾಸದಿಂದ ಕಾಪಾಡಿದರು. ಅವರ ಪ್ರೀತಿಯೂ ಪರಾಮರಿಕೆಯೂ ನಮಗೆ ಇರದಿದ್ದರೆ, ನಾವು ಆಗಲೇ ಸತ್ತು ಹೋಗುತ್ತಿದ್ದೆವು. ಅದರಿಂದ ಅವರ ಉಪಕಾರವನ್ನು ನೆನಿಸುವದೂ, ಅವರನ್ನು ಪರಾಮರಿಸುವದೂ, ಪ್ರೀತಿ ಮಾಡುವದೂ, ಅವರ ಮಾತುಗಳನ್ನು ಕೇಳುವದೂ, ನಮಗೆ ತಕ್ಕದ್ದು. ಅಕ್ಕ ತಂಗಿ ಅಣ್ಣ ತಮ್ಮಂದಿರು ಒಬ್ಬ ತಾಯಿ ತಂದೆಯಿಂದ ಹುಟ್ಟಿ ಬೆಳಿದ ಕಾರಣ, ಅವರು ಒಬ್ಬರಿಗೊಬ್ಬರು ಪ್ರೀತಿ ಮಾಡ ತಕ್ಕದ್ದು. ಅವರು ತಮ್ಮೊಳಗೆ ತಾವು ಪ್ರೀತಿಯಿಂದ ಇದ್ದರೆ, ಜನರು ಅವರನ್ನು ನೋಡಿ, ಸಂತೋಷಬಡುತ್ತಾರೆ. ಹಾಗಲ್ಲದೆ ತಮ್ಮೊಳಗೆ ತಾವು ಜಗಳ ಮಾಡುತ್ತಿದ್ದರೆ, ಜನರ ಬಾಯಿಂದ ಛೀ ಎನಿಸಿ ಕೊಳ್ಳುತ್ತಾರೆ. ಕುಟುಂಬದೊಳಗಿನವರೆಲ್ಲರು ಪ್ರೀತಿಯಿಂದ ಇರುವದರಿಂದ ಸಂತೋಷವಿರುತ್ತದೆ; ಸಂತೋಷದಿಂದ ಸೌಖ್ಯವು ಹೆಚ್ಚುತ್ತದೆ. ಅದರಿಂದ ಕುಟುಂಬದೊಳಗಿನವರೆಲ್ಲರು, ಒಬ್ಬರಿಗೊಬ್ಬರಿಗೆ ವೈಮನಸ್ಸು ಬಾರದಂತೆ ಬಹು ಪ್ರೀತಿಯಿಂದಲೂ ಜಾಗ್ರತೆಯಿಂದಲೂ ನಡೆದು ಕೊಳ್ಳ ತಕ್ಕದ್ದು.

8. My Mother.

೮. ನನ್ನ ತಾಯಿ.

ಉಣಿಸಿದವರಾರೆನಗೆ ಮೃದುತರ
ಸ್ತನಗಳಿಂದತಿ ಪ್ರೇಮದಲಿ, ಚುಂ—
ಬನವ ನೀಡಿದರಾರು ಯನ್ನಯ ಪುಟ್ಟಗಲ್ಲದಲಿ? ||
ಕ್ಷಣಕ್ಷಣಕೆ ನಾ ಶಯನಿಸದೆ ರೋ—
ದನವ ಮಾಡಿದ ಸಮಯದಲಿ ಬಲು
ವಿನಯದಿಂ ಜೋಗಳವ ಪಾಡಿದರಾರು ಮಮ ಮಾತೇ? ||೧||

ಮಲಗಿರಲು ನಾನೆನ್ನ ತೊಟ್ಟಿಲೊ—
ಳೊಲಿದು ಸಾನಂದಾಶ್ರು ಸುರಿಸುತ,
ಕುಳಿತು ಕಾಯುತ, ರಕ್ಷಿಸಿದರಾರೆನಗೆ ಮಮತೆಯಲಿ? ||
ಅಳುತಿರಲು ರೋಗದಲಿ, ಔಷಧ—
ಗಳನು ಯನಗೀವುತಲಿ, ಶೋಕದಿ,
ಎಳಿಯ ಸಾಯುವಿಯೆಂದು ಮರುಗಿದರಾರು ಮಮ ಮಾತೇ? ||೨||

ನಡಿಯುತಿರೆ ಬೀಳಲು, ಸಹಾಯಕೆ
ತಡಿಯದಲೆ ಬಂದೆತ್ತಿ, ಮುದ್ದುಗ—
ಳಿಡುತ ಮೃದು ಭಾಷಣವ ಮಾಡಿದರಾರಳದಿರೆಂದು?||
ನುಡಿಗಳಾಡಲು ಕಲಿಸಿದವರಾ—
ರಡಿಗಡಿಗೆ ಸದ್ಬೋಧವಂ ಶ್ರುತ—
ಬಡಿಸಿ, ಜಾಣನ ಮಾಡಿದವರಾರೆನಗೆ ಮಮ ಮಾತೇ? ||೩||

ಪರಮ ಪ್ರೇಮವ ಯನಗೆ ನೀನೀ
ಪರಿಯಲಿಂ ಮಾಡಿರಲು, ತಾಯಿಯೆ!
ಕೊರತೆಬಡಿಸುವೆನೆಂದಿಗಾದರು ನಿನ್ನ ಪ್ರೀತಿಸಲೂ? ||

ತ್ವರದಿ ನಿನ್ನಯ ದುಃಖಗಳನಪ—
ಹರಿಸುವೆನು, ಮುಪ್ಪಾದ ಬಳಿಕಾ—
ದರದಿ ಸಂರಕ್ಷಿಸದಲಿರುವೆನೆ ಪ್ರೀಯ ಮಮ ಮಾತೇ? || ೪ ||

9. Letter from a Gentleman to a Schoolmaster.


೯. ಒಬ್ಬ ಗೃಹಸ್ಥನು ಅಯ್ಯನವರಿಗೆ ಬರೆದ ಪತ್ರ.

ಶಾಸ್ತ್ರಕಲಾಸಂಪನ್ನರಾದ ಬಹು ಘನವುಳ್ಳ ಜಗನ್ನಾಥ ಪಂಡಿತರಿಗೆ.— ರಾಮರಾಯನು ಶಿರಸಾಷ್ಟಾಂಗ ನಮಸ್ಕಾರ ಮಾಡಿ, ಬರ ಕೊಂಡ ವಿಜ್ಞಾಪನೆ. ಅದಾಗಿ ಈಗ ಮಾಘ ಶುದ್ಧ ೧೨ ಗುರುವಾರದ ವರಿಗೆ ಕುಟುಂಬ ಸಹಿತ ಸುರಕ್ಷಿತನಾಗಿದ್ದೇನೆ. ತರುವಾಯ ತಮ್ಮ ವಿದ್ಯೆ ಬುದ್ಧಿಯ ಕೀರ್ತಿಯನ್ನು ಬಹಳವಾಗಿ ಕೇಳಿ, ತಮಗೊಂದು ಬಿನ್ನಹ ಮಾಡಿ ಕೊಳ್ಳುತ್ತೇನೆ, ಅದನ್ನು ದಯವಿಟ್ಟು ಪರಾಮರ್ಶಿಸ ಬೇಕು.

ನನ್ನ ಮಗನಾದ ರಂಗನು ಈಗ ಆರು ವರುಷದವನಾಗಿದ್ದಾನೆ. ಅವನು ಇನ್ನೂ ಚಿಕ್ಕವನಾಗಿದ್ದರೂ, ಬಹಳ ಚುರುಕು ಬುದ್ಧಿಯುಳ್ಳವನಾಗಿಯೂ ಸುಶೀಲನಾಗಿಯೂ ಇದ್ದಾನೆ. ಅವನು ತನ್ನ ಅಣ್ಣನ ಕಡೆಯಿಂದ ಹೇಳಿಸಿ ಕೊಂಡು, ಮನೆಯಲ್ಲಿ ಧೂಳಾಕ್ಷರ ಮಾತ್ರ ಕಲಿತು ಇದ್ದಾನೆ. ಆದರೆ ಅವನಿಗೆ ಚನ್ನಾಗಿ ವಿದ್ಯೆ ಹೇಳಿ ಕೊಟ್ಟು, ಸದ್ಗುಣ ಕಲಿಸಿ, ವಿದ್ವಾಂಸನನ್ನು ಮಾಡ ಬಲ್ಲವರು ತಮ್ಮ ಹೊರ್ತು ಅನ್ಯರನ್ನು ಕಾಣೆ. ಈಗ ಅವನನ್ನು ತಮ್ಮ ಸನ್ನಿಧಿಗೆ ಕಳುಹಿಸಿದ್ದೇನೆ. ಅವನು ಬಂದು ಮುಟ್ಟಿದ ಮೇಲೆ ತಮ್ಮ ಸಾಲೆಯೊಳಗೆ ಇಟ್ಟು ಕೊಂಡು, ಅವನಿಗೆ ಚನ್ನಾಗಿ ವಿದ್ಯೆ ಕಲಿಸಿ, ಕೀರ್ತಿಯನ್ನು ಪಡಿದು ಕೊಳ್ಳ ಬೇಕು. ಅವನು ಇನ್ನು ಚಿಕ್ಕವನಾಗಿರುವದರಿಂದಲೂ, ಬೆಳಗಾವಿಯಲ್ಲಿ ಅವನ ಪರಾಮರ್ಶ ಮಾಡುವವರ್‍ಯಾರು ಇಲ್ಲದಿರುವದರಿಂದಲೂ, ಆತನನ್ನು ತಮ್ಮ ಹೊಟ್ಟೆಯ ಮಗನಂತೆ ತಿಳಿದು ಸಂರಕ್ಷಣೆ ಮಾಡಿ, ವಿದ್ಯೆ ಕಲಿಸ ಬೇಕು. ಇತಿ ಶಿರಸಾಷ್ಟಾಂಗ ನಮಸ್ಕಾರ.

10. The Wolf.

೧೦. ತೋಳ.



ತೋಳನ ರೂಪವು ನಾಯಿಯ ರೂಪದ ಪ್ರಕಾರ ಇರುತ್ತದೆ. ಅದು ಹಗಲೆಲ್ಲ ಅಡವಿಯಲ್ಲಿ ಇದ್ದು, ರಾತ್ರಿಕಾಲದಲ್ಲಿ ಊರೊಳಗೆ ಶೇರಿ, ಕೋಳಿಗಳನ್ನೂ ಕುರಿಗಳನ್ನೂ ಕೊಂದು ತಿನ್ನುತ್ತದೆ. ಥಳಿ ದೇಶಗಳಲ್ಲಿ ತೋಳಗಳು ಬಹಳ. ಅಲ್ಲಿ ಅವು ಗುಂಪು ಗುಂಪಾಗಿ ಆಹಾರ ಹುಡುಕುತ್ತವೆ. ಅವು ಹಂದಿಗಳನ್ನೂ, ಕೆಲವು ಕಾಲದಲ್ಲಿ ನಾಯಿಗಳನ್ನು ಸಹ ತೆಗೆದು ಕೊಂಡು ಹೋಗುವದುಂಟು. ತೋಳನ ಆಟ ಎತ್ತು ಕುದುರೆಗಳ ಮುಂದೆ ನಡಿಯುವದಿಲ್ಲ. ಅವಾದರೂ, ಏಕ ಕಾಲಕ್ಕೆ ಬಹಳ ತೋಳಗಳು ಬಂದರೆ, ಸೋಲುತ್ತವೆ. ಕೆಲವು ಕಾಲದಲ್ಲಿ ಮನುಷ್ಯನು ಸಹ ಅವುಗಳ ಕೈಗೆ ಸಿಗುತ್ತಾನೆ. ಯುರೋಪ ಖಂಡದಲ್ಲಿ ಮೊದಲು ಬಹಳ ತೋಳಗಳಿದ್ದವು. ಆದರೆ ಈಗ ಅವು ಬಹಳವಾಗಿ ಕಡಿಮೆಯಾಗಿದ್ಧಾವೆ. ಇಂಗ್ಲಾಂಡ ದೇಶದಲ್ಲಿ ಮೊದಲು ತೋಳಗಳು ಇದ್ದವು. ಅವು ಊರೊಳಗೆ ಬಂದು, ಬಹಳ ನಾಶ ಮಾಡಿ ಹೋಗುತ್ತಿದ್ದವು. ಆದ ಕಾರಣ ಅವನ್ನು ಸಂಹಾರ ಮಾಡ ಬೇಕೆಂದು, ಅಲ್ಲಿಯ ಅರಸನಾದ ಎದ್ಗರರಾಯನು ಫಲಾಣಿ ತೋಳಗಳನ್ನು ಕೊಂದು, ಅವುಗಳ ತಲೆಗಳನ್ನು ಸರಕಾರಕ್ಕೆ ತಂದು ತೋರಿಸಿ, ಫಲಾಣಿ ಭೂಮಿ ಲಾವಣಿಗೆ ತೆಗದು ಕೊಳ್ಳ ಬೇ

ಕೆಂದು ಕಟ್ಟಳೆ ಮಾಡಿ ಬಿಟ್ಟಿದ್ದನು; ಮತ್ತು ಅವು ತೀವ್ರ ನಾಶವಾಗಿ
ಹೋಗ ಬೇಕೆಂದು ಚಿಕ್ಕ ಚಿಕ್ಕ ಅಪರಾಧ ಮಾಡಿದವರು ಇಂತಿಷ್ಟು ತಲೆ
ಗಳನ್ನು ತಂದು ಕೊಟ್ಟರೆ, ಬಿಡುಗಡೆಯಾಗುವರೆಂದು ಪ್ರಕಟಿಸಿದ್ದನು.

11. The Cocoa Palm.

೧೧. ತೆಂಗಿನ ಮರ.



ತೆಂಗಿನ ಮರಗಳು ಹಿಂದುಸ್ಥಾನ ದೇಶದಲ್ಲಿಯೂ, ಸಿಂಹಳ ದ್ವೀಪದಲ್ಲಿ
ಯೂ, ಅಫ್ರಿಕ ಖಂಡದೊಳಗಿನ ಜಂಜಿಬಾರ ಎಂಬ ದೇಶದಲ್ಲಿಯೂ, ಬ
ಹಳವಾಗಿ ಬೆಳೆಯುತ್ತವೆ. ಅವು ನಾಲ್ವತ್ತು ಐವತ್ತು ಮೊಳ ಎತ್ತರ ಇ
ರುತ್ತವೆ. ಅದಕ್ಕೆ ಅಡ್ಡ ಕೊಂಬೆಗಳು ಹುಟ್ಟುವದಿಲ್ಲ. ತೆಂಗಿನ ಮರವು,
ಹುಟ್ಟಿದ ಮೇಲೆ ಎರಡು ಮೂರು ವರ್ಷ ಸ್ವಲ್ಪ ನೀರು ಹೊಯಿದರೆ,
ನೂರು ವರ್ಷಗಳ ತನಕ ಎಥೇಷ್ಟ ಫಲ ಫಲಿಸುತ್ತದೆ. ಐದನೇ ವರ್ಷದಲ್ಲಿ
ಕಾಯಿ ಆಗಲಿಕ್ಕೆ ಆರಂಭವಾಗುತ್ತದೆ. ತೆಂಗಿನ ಗಿಡಕ್ಕೆ ತಿಂಗಳು ತಿಂಗ
ಳಿಗೆ ಹೂವು ಬಿಟ್ಟು, ಇಪ್ಪತ್ತು ಇಪ್ಪತ್ತೈದು ಕಾಯಿ ಇರುವ ಗೊನೆಗಳು
ಆಗುತ್ತವೆ. ಕಾಯಿ ಆರು ತಿಂಗಳಿಗೆ ಹಣ್ಣು ಆಗುತ್ತದೆ. ಅದರೊಳಗಿನ
ನೀರು ತಿಂಗಳು ತಿಂಗಳಿಗೆ ಹೆಚ್ಚೆಚ್ಚು ಶೀಯಾಗುತ್ತ ಹೋಗುತ್ತದೆ. ಆ
ನೀರಿಗೆ ಎಳೆನೀರೆಂಬ ಹೆಸರು. ನಾಲ್ಕನೇ ಐದನೇ ತಿಂಗಳಲ್ಲಿ ನೀರು ಆರಿ,
ಚಿಪ್ಪುಗಟ್ಟಿ, ಒಳಗೆ ಕೊಬ್ಬರಿಯಾಗುತ್ತದೆ. ವರ್ಷಕ್ಕೆ ನಾಲ್ಕು ಸಾರಿ ತೆಂ

ಗಿನ ಕಾಯಿಗಳನ್ನು ಕೊಯ್ಯುತ್ತಾರೆ. ಒಳ್ಳೇ ಭೂಮಿ ಇದ್ದರೆ, ಒಂದು ಗಿಡಕ್ಕೆ ಸಾಧಾರಣವಾಗಿ ವರ್ಷಕ್ಕೆ ಐನೂರು ಮಟ್ಟಿಗೆ ಕಾಯಿಗಳಾಗುತ್ತವೆ. ತೆಂಗಿನ ಕಾಯಿಗಳನ್ನು ಒಣಗಿಸಿ, ಕೊಬ್ಬರಿ ತೆಗೆದು, ಕತ್ತರಿಸಿ, ಗಾಣಕ್ಕೆ ಹಾಕಿ, ಎಣ್ಣೆ ತೆಗೆಯುತ್ತಾರೆ. ತೆಂಗಿನ ಎಲೆಗಳಿಂದ ಚಾಪೆಗಳನ್ನು ಹೆಣೆಯುತ್ತಾರೆ, ನಾರಿನಿಂದ ಕಾತಿಯನ್ನು ಹೊಸೆಯುತ್ತಾರೆ, ಕಡ್ಡಿಗಳಿಂದ ಕಸಬರಿಕೆಗಳನ್ನು ಕಟ್ಟುತ್ತಾರೆ, ಕಟ್ಟಿಗೆಯಿಂದ ಮನೆ ಹಾಕುತ್ತಾರೆ. ಈ ಪ್ರಕಾರ ಬೊಡ್ಡಿಯ ಮೊದಲುಗೊಂಡು ತುದಿಯ ಮಟ್ಟಿಗೆ ತೆಂಗಿನ ಮರದೊಳಗೆ ಉಪಯೋಗವಿಲ್ಲದ ಭಾಗ ಒಂದಾದರೂ ಇಲ್ಲ.

12. Quicksilver.

೧೨. ಪಾದರಸ.

ಪಾದರಸವು ಬೆಳ್ಳಗೆ ಇರುತ್ತದೆ. ಅದು ನೀರಿಗಿಂತ ಹೆಚ್ಚು ಕಡಿಮೆ ಹದಿನಾಲ್ಕು ಪಾಲು ಜಡವಾದದ್ದು. ಜರ್ಮನಿ ಮತ್ತು ಸ್ಪೇನ್ ಇವೆರಡು ದೇಶಗಳಲ್ಲಿ ಪಾದರಸದ ಖಣಿಗಳು ಬಹಳ. ಇಂದಿಗೆ ಸುಮಾರು ಮುನ್ನೂರು ವರ್ಷಗಳ ಕೆಳಗೆ ಓಸ್ಟ್ರಿಯಾ ದೇಶದಲ್ಲಿ ಅದರ ಶೋಧನೆಯಾಯಿತು. ಅದು ಹ್ಯಾಗೆಂದರೆ:—ಒಬ್ಬ ಮನುಷ್ಯನು ತನ್ನ ಕೆಲಸವನ್ನೆಲ್ಲ ತೀರಿಸಿ ಕೊಂಡು, ಸಾಯಂಕಾಲಕ್ಕೆ ಮನೆಗೆ ಹೋಗುವಾಗ್ಯೆ, ತನ್ನ ಹೊಸ ಪಿಪಾಯಿಯೊಳಗೆ ನೀರು ನಿಲ್ಲುತ್ತದೆಯೋ ಇಲ್ಲವೋ ಎಂದು ನೋಡುವದಕ್ಕಾಗಿ, ಅದನ್ನು ದಿನ್ನಿಯ ಮೇಲಿಂದ ಬೀಳುತ್ತಿದ್ದ ಒಂದು ಝರಿಯ ಕೆಳಗೆ ಇಟ್ಟು ಹೋದನು. ಮರು ದಿವಸ ಪ್ರಾತಃಕಾಲಕ್ಕೆ ಎದ್ದು ಹೋಗಿ, ಅದನ್ನು ಅಗಳಾಡಿಸಿ ನೋಡಲಾಗಿ, ಒಳಗೆ ತಳಕ್ಕೆ ಏನೋ ಒಂದು ಪ್ರಕಾರದ ಬೆಳ್ಳನ್ನ ಪದಾರ್ಥವಿದ್ದ ಕಾರಣ ಅಗಳಾಡಲಿಲ್ಲ. ಆ ಮೇಲೆ ಅಲ್ಲಿಯ ಜನರಿಗೆಲ್ಲ ಆ ವರ್ತಮಾನ ತಿಳಿದು, ಇದರ ಕಾರಣವೇನಿರಬಹುದು, ಇದು ಎಲ್ಲಿಂದ ಬಂದಿರ ಬಹುದು ಎಂದು ವಿಚಾರ ಮಾಡಲಾರಂಭಿಸಿದರು. ಕೊನೆಗೆ ಸಮೀಪದಲ್ಲಿದ್ದ ಖಣಿಯೊಳಗಿಂದ ಹರಿದು

ಬಂದ ಇದೊಂದು ಜಾತಿಯ ಧಾತುವೆಂದು ಸಿದ್ಧವಾಯಿತು. ಆ ಮೇಲೆ ಆ ದೇಶದ ಅರಸನು ಅಷ್ಟು ಶೋಧನೆ ಮಾಡಿದವರಿಗೆ ಬಹಳ ದ್ರವ್ಯವನ್ನು ಕೊಟ್ಟು, ಆ ಖಣಿಯನ್ನು ತನ್ನ ವಶ ಮಾಡಿ ಕೊಂಡನು. ಈಗ ಅದು ಐನೂರು ಮೊಳ ಆಳ ಅಗಿಯಲ್ಪಟ್ಟದೆ. ಅದರೊಳಗೆ ಜನರು ನಿಚ್ಚಣಿಕೆಯ ಮೇಲಿಂದ ಇಳಿದು ಹೋಗಿ, ನಿಚ್ಚಣಿಕೆಯ ಮೇಲಿಂದ ಹತ್ತಿ ಬರುತ್ತಾರೆ. ಯಾವ ಮನುಷ್ಯನಾದರು ಅಲ್ಲಿ ಹೋಗಿ, ಸುಮಾರು ಎರಡು ತಾಸು ಪ್ರಯಾಸಬಟ್ಟರೆ, ಎರಡು ಮಣ ಪಾದರಸ ದೊರಿಯುತ್ತದೆ.

13. The Old Man and the Death.

೧೩. ಮುದುಕನೂ ಯಮದೇವರೂ.

ಒಬ್ಬ ಮುಪ್ಪಿನ ಮುದುಕನು ಕಟ್ಟಿಗೆ ತರುವದಕ್ಕೆ ಅಡವಿಗೆ ಹೋಗಿ, ಕಟ್ಟಿಗೆಗಳನ್ನು ಕೂಡಿಸಿ, ಒಂದು ಹೊರೆಯಾಗಿ ಕಟ್ಟಿ, ಆ ಹೊರೆಯನ್ನು ತಲೆಯ ಮೇಲೆ ಹೊತ್ತು ಕೊಂಡು ಬರುವ ಸಮಯದಲ್ಲಿ, ಮನೆಯು ಬಹಳ ದೂರದಲ್ಲಿದ್ದದರಿಂದಲೂ, ತಲೆಯ ಮೇಲಿನ ಹೊರೆಯು ಭಾರವಾಗಿದ್ದದರಿಂದಲೂ, ದಣಿದು, ಹೊರೆಯನ್ನು ಕೆಳಗೆ ಹಾಕಿ, ಕೂತು ಕೊಂಡು, ಯಮದೇವರನ್ನು ನೆನಿದು, "ಎಲಾ ಯಮನೇ! ಪ್ರಾಣಿ ಮಾತ್ರಕ್ಕೂ ವಿಶ್ರಾಂತಿಯನ್ನು ಕೊಡುವವನೇ! ನೀನು ಬಂದು ನನ್ನ ಶ್ರಮಗಳನ್ನು ಒಂದೇ ಸಾರಿಯಾಗಿ ನಿವಾರಣೆ ಮಾಡ ಬಾರದೇ!" ಎಂದು ಅನಲು, ಯಮನು ಆ ಮಾತನ್ನು ಕೇಳಿ, ಆ ಕ್ಷಣವೇ ಆ ಮುದುಕನ ಮುಂದೆ ಬಂದು ನಿಂತು, "ಅಪ್ಪಾ, ಏನು ಕಾರಣದಿಂದ ನನ್ನನ್ನು ಸ್ಮರಿಸಿದಿ?" ಎಂದು ಕೇಳಲಾಗಿ, ಆ ಮುದುಕನು ಯಮನ ಘೋರ ರೂಪವನ್ನು ಕಂಡು, ಅಂಜಿ, ನಡುಗುತ್ತ—"ಎಲೈ ಯಮದೇವರೇ, ನಾನು ಕೇವಲ ಅಶಕ್ತನು, ನನ್ನ ತಲೆಯ ಮೇಲಿನ ಹೊರೆಯು ದೊಡ್ಡದು; ಅದು ಕೈತಪ್ಪಿ ಕೆಳಗೆ ಬಿತ್ತು; ಅದನ್ನು ತಿರಿಗಿ ಹೊರಿಸ ಬೇಕೆಂಬುವದಕ್ಕಾಗಿಯೇ ನಿನ್ನ

ನಾಮಸ್ಮರಣೆಯನ್ನು ಮಾಡಿದೆನು ಹೊರ್ತು, ಬೇರೊಂದು ಕೆಲಸವಿಲ್ಲ; ಇದು ನಿಶ್ಚಯವೇ. ಇಷ್ಟೇ ಕೆಲಸಕ್ಕಾಗಿ ನಿನ್ನ ಕರೆದದ್ದರಿಂದ ನಿನಗೆ ಶಿಟ್ಟು ಬಂದಿದ್ದರೆ, ನಾನು ನಿನ್ನ ಕಾಲು ಬೀಳುತ್ತೇನೆ, ನನ್ನನ್ನು ಕ್ಷಮಿಸಿ, ದಯ ಮಾಡಿ ಬಂದ ಹಾದಿಯಿಂದ ತಿರಿಗಿ ಹೋಗು" ಎಂದು ಹೇಳಿದನು.

ತಾತ್ಪರ್ಯವೇನಂದರೆ, ಜನರು ಭಾರಿ ಭಾರಿಗೆ ಮರಣ ಬಂದರೆ, ಒಳ್ಳೇದಾಗುವದೆಂದು ಅನುತಿರುತ್ತಾರೆ; ಆದರೆ ಮರಣ ಬಂದಾಗ್ಯೆ ಹ್ಯಾಗೆ ಸಾಯುವೆವೆಂದು ಚಿಂತೆ ಮಾಡುತ್ತಾರೆ.

14. The Rat and its Burden.

೧೪. ಹೊರೆ ಹೊತ್ತು ಕೊಂಡ ಇಲಿ.



ಮನೆಗಳಲ್ಲಿ ಹ್ಯಾಗೋ ಹಾಗೆಯೇ ಹಡಗಗಳಲ್ಲಿ ಇಲಿಗಳು ಒಂದೊಂದು ವೇಳೆ ಬಹಳ ನಷ್ಟ ಮಾಡುವ ಕಾರಣ ಹಿಡಿ ಹಿಡಿದು ಕೊಲ್ಲುವದರಿಂದ,

ಇಲ್ಲವೆ ಹಡಗದೊಳಗೆ ಗಂಧಕ ಸುಡುವದರಿಂದ, ಇಲ್ಲವೆ ಬೇರೆ ಯಾವದಾದರೊಂದು ಉಪಾಯದಿಂದ ಅವುಗಳನ್ನು ಕಡಿಮೆ ಮಾಡ ಬೇಕಾಗುತ್ತದೆ. ಒಂದಾನೊಂದು ಕಾಲದಲ್ಲಿ ಒಂದು ಹಡಗವು ಒಂದು ಪಟ್ಣದಿಂದ ಇನ್ನೊಂದು ಪಟ್ಣಕ್ಕೆ ಸಾಮಾನ ಹೇರಿ ಕೊಂಡು, ಸಮುದ್ರದೊಳಗಿಂದ ಹೋಗುತ್ತಿರಲಾಗಿ, ಇಲಿಗಳು ಬಹಳ ಹೆಚ್ಚಾಗಿ, ಹಡಗದಲ್ಲಿರುವ ಸಾಮಾನವನ್ನೆಲ್ಲ ತಿಂದು ನಷ್ಟ ಮಾಡಿದದರಿಂದ, ಹಡಗದವರು ಬಹಳ ಬೇಸತ್ತು, ಧಡಕ್ಕೆ ಬಂದು ಮುಟ್ಟಿದ ಕೂಡ್ಲೆ ಅವುಗಳನ್ನೆಲ್ಲ ನಾಶ ಮಾಡಿಬಿಡ ಬೇಕೆಂದು ನಿಶ್ಚಯಿಸಿ, ಹಡಗವು ಧಡಕ್ಕೆ ಹೋಗಿ ಮುಟ್ಟಿದ ಮೇಲೆ, ಅದರೊಳಗೆ ಗಂಧಕ ಸುಡಲಾರಂಭಿಸಲಾಗಿ, ಗಂಧಕದ ಕಮರು ತಾಳಲಾರದೆ ಓಡಿ ಹೋಗುವದಕ್ಕೆ ಹೊರಗೆ ಬರುವಾಗ, ಹಡಗದವರು ಅವುಗಳನ್ನು ಬಡಿಯುತ್ತಿದ್ದರು. ಅಷ್ಟರಲ್ಲಿ ಕುರುಡಾಗಿಯೂ ನರೆಗೂದಲುಳ್ಳದ್ದಾಗಿಯೂ ಇರುವ ಒಂದು ಇಲಿಯನ್ನು ಮತ್ತೊಂದು ಇಲಿಯು ತನ್ನ ಬೆನ್ನಿನ ಮೇಲೆ ಹೊತ್ತು ಕೊಂಡು ಬರುತಿತ್ತು. ಅದನ್ನು ಹಡಗದವರು ಕಂಡು, ಅದು ಹಿರಿ ಇಲಿಯನ್ನು ಪ್ರೀತಿಯಿಂದ ತನ್ನ ಮೇಲೆ ಕೂಡ್ರಿಸಿ ಕೊಂಡು ಹೋಗುತ್ತದೆ, ಅದನ್ನು ಹೊಡಿಯ ಬಾರದೆಂದು ಹಾಗೆಯೇ ಬಿಟ್ಟು ಬಿಟ್ಟರು. ಅಲ್ಪ ಜೀವಿಯಾದ ಇಲಿಯು ಈ ಪ್ರಕಾರವಾಗಿ ಪ್ರೀತಿ ಮಾಡಿದರೆ, ಮನುಷ್ಯರು ತಮ್ಮ ಹಿರಿಯರಿಗೆ ಎಷ್ಟು ಪ್ರೀತಿ ಮಾಡಬೇಕು?

15. Act up to the dictates of your Conscience.

೧೫. ಮನ ಮೆಚ್ಚುವಂತೆ ಆಚರಿಸ ಬೇಕು.

ಜನ ಮೆಚ್ಚ ನಡಕೊಂಡರೇನುಂಟು ಲೋಕದಿ?
ಮನ ಮೆಚ್ಚ ನಡಕೊಂಬುವದೆ ಚಂದವು! ||
ಜನರೇನು ಬಲ್ಲರು ಒಳಗಾಗೋ ಕೃತ್ಯವ
ಮನವರಿಯದ ಕಳ್ಳತನವಿಲ್ಲವಲ್ಲ? || ೧ ||

ಜನರು ಮೆಚ್ಚುತೆ ನಿನ್ನ ನಿಜ ಸುಖಕೊಯ್ವರೆ?
ಜನ ಮೆಚ್ಚೆ ದೇವರು ಬಿಡುತಿಹನೆ? ||
ಜನರಲ್ಲಿ ನಿನ್ನನು ದೊಡ್ಡಾತನೆಂದರೆ,
ಚಿನುಮಯ ದೇವರು ಸರ್ವವರಿಯನೆ? ಮರುಳೆ! || ೨ ||

16. Letter from a Schoolboy to his Father.

೧೬. ಮಗನು ತಂದೆಗೆ ಬರೆದ ಪತ್ರ.

ಪ್ರಿಯರ ಚರಣಸನ್ನಿಧಾನಕ್ಕೆ.—ಬಾಲಕ ರಂಗನು ಮಾಡುವ ಶಿರ ಸಾಷ್ಟಾಂಗ ನಮಸ್ಕಾರವು. ಅದಾಗಿ ಈಗ ಚೈತ್ರ ಶುದ್ಧ ೮ ವರಿಗೆ ತಮ್ಮ ಅನುಗ್ರಹದಿಂದ ಬೆಳಗಾವಿಯಲ್ಲಿ ಕ್ಷೇಮದಿಂದ ಇದ್ದೇನೆ. ತಾವು ಮೇಲಿಂದ ಮೇಲೆ ಆಶೀರ್ವಾದಪತ್ರಗಳನ್ನು ಬರಿದು, ಬಾಲಕನ ಸಮಾಚಾರ ತೆಗೆದು ಕೊಳ್ಳುತ್ತಿರ ಬೇಕು. ತರುವಾಯ ತಾವು ಶುದ್ಧ ೪ ದಿವಸ ಬರಿದ ಆಶೀರ್ವಾದಪತ್ರ ಈ ಹೊತ್ತು ಪ್ರಾತಃಕಾಲದಲ್ಲಿ ಸಾಲಿಯಲ್ಲಿರುವಾಗ್ಯೆ ಬಂದು ಮುಟ್ಟಿತು. ಅದನ್ನು ಒಡಿದು ನೋಡಲಾಗಿ, ಒಳಗೆ ನಮ್ಮ ಅಯ್ಯನವರ ಹೆಸರಿಲಿ ಒಂದು ಪತ್ರವಿತ್ತು; ಅದನ್ನು ಅವರಿಗೆ ಒಯ್ದು ಕೊಟ್ಟೆನು. ನನ್ನ ಹೆಸರಿನ ಪತ್ರ ಸಾಲಿಯಲ್ಲಿ ಎರಡು ಸಾರಿ, ಈಗ ಮನೆಯಲ್ಲಿ ಎರಡು ಸಾರಿ, ಹೀಗೆ ನಾಲ್ಕು ಸಾರಿ ಓದಿದಾಗ್ಯೂ ಪ್ರೀತಿ ತೀರಲಿಲ್ಲ. ಅದರೊಳಗೆ ಬರೆದಿರುವ ಒಂದೊಂದು ಉಪದೇಶವು ಸಕ್ಕರಿಗಿಂತ ಸವಿಯಾಗಿದೆ. ನಾನು ಅವುಗಳನ್ನೆಲ್ಲ ಮನಸ್ಸುಗೊಟ್ಟು ಓದಿ, ಚನ್ನಾಗಿ ಗ್ರಹಿಸಿ ಕೊಂಡೆನು.

ನಾನು ವಿದ್ವಾಂಸನಾಗಿ ಜನರೊಳಗೆ ಯೋಗ್ಯನೆನಿಸಿ ಕೊಳ್ಳ ಬೇಕೆಂದು ಹಿರಿಯರು ಇಷ್ಟು ದ್ರವ್ಯವನ್ನು ವೆಚ್ಚ ಮಾಡಿ, ಈ ದೊಡ್ಡ ಸಾಲಿಯಲ್ಲಿ ಇಟ್ಟಿದ್ಧೀರೆಂಬುವದನ್ನು ನಾನು ತಿಳಿದು, ನಾನು ಒಂದು ಕ್ಷಣವಾದರೂ ವ್ಯರ್ಥ ಕಳಿಯುವದಿಲ್ಲ. ಸಾಲಿ ಬಿಟ್ಟು ಮನೆಗೆ ಬಂದ ಮೇಲೆ

ಊಟ ಮಾಡಿ, ಆ ದಿವಸ ಪ್ರಾತಃಕಾಲಕ್ಕೆ ಕಲಿತ ಪಾಠಗಳನ್ನು ತಿರಿಗಿ ಗ್ರಹಿಸಿ ಕೊಂಡು, ಲೆಖ್ಖ ಮಾಡುತ್ತಾ ಕೂಡ್ರುತ್ತೇನೆ. ರಾತ್ರಿಕಾಲಕ್ಕೆ ಬಂದು, ಪುಸ್ತಕ ಓದುತ್ತ ಕೂಡ್ರುತ್ತೇನೆ. ಸಾರಾಂಶ, ತಾವು ನನಗೆ ಬರುವಾಗ್ಯೆ ಹೇಳಿದ ಉಪದೇಶದಂತೆ ಕೈಲಾದ ಮಟ್ಟಿಗೆ ನಡಿದು ಕೊಳ್ಳುತ್ತೇನೆ. ನಾನು ಚನ್ನಾಗಿ ವಿದ್ಯೆ ಕಲಿತು, ತಮ್ಮ ಮನಸ್ಸು ಯಾವಾಗ್ಯೆ ತೃಪ್ತಿಬಡಿಸುವೆನೋ ಎಂಬ ಮಹತ್ಕಾಂಕ್ಷೆಯು ಯಾವಾಗ್ಯೂ ನನ್ನ ಮನಸ್ಸಿನಲ್ಲಿ ಕಟಿಯುತ್ತದೆ. ನಾನು ವಿದ್ವಾಂಸನಾದದ್ದನ್ನು ನೋಡಿ ಪ್ರಿಯ ಅಮ್ಮಯ್ಯನವರು ಹರುಷ ಬಡುವ ಕಾಲವು ಎಂದು ಬರುವದೋ ಎಂಬ ಚಿಂತೆಯು ಮನಸ್ಸೆಲ್ಲ ವ್ಯಾಪಿಸಿ ಕೊಂಡದೆ. ಇತಿ ತಮಗೂ ಅಮ್ಮಯ್ಯನವರಿಗೂ ಅಣ್ಣಂದರಿಗೂ ಶಿರಸಾಷ್ಟಾಂಗ ನಮಸ್ಕಾರ.

17. The Camel.

೧೭. ಒಂಟೆ.



ಒಂಟೆಯು ಬಹು ನಮ್ರ ಸ್ವಭಾವವುಳ್ಳದ್ದು. ಅದು ಅರ್ಬಸ್ಥಾನ, ಅಫ್ರಿಕ ಮೊದಲಾದ ಉಸಬಿನ ದೇಶಗಳಲ್ಲಿ ದೊರಿಯುತ್ತದೆ. ಅದಕ್ಕೆ ಎಂಟೆಂಟು ದಿವಸಗಳ ಮಟ್ಟಿಗೆ ಅನ್ನೋದಕವು ದೊರಿಯದಿದ್ದರೂ ಚಿಂತೆ ಇಲ್ಲ, ಹಾಗೆಯೇ ಹಾದಿ ನಡಿಯುತ್ತದೆ. ಬೆನ್ನಿನ ಮೇಲೆ ಭಾರ ಹೇರುವಾಗ್ಯೆ ಕಾಲುಗಳನ್ನು ಮಡಿಚಿ ಕೊಂಡು ಕೂಡ್ರುವಂತೆ ಅದಕ್ಕೆ ಕಲಿಸಿರುತ್ತಾರೆ.

ಆ ಪ್ರಕಾರ ಅದಕ್ಕೆ ಕಲಿಸದೆ ಹೋದರೆ, ಮೊಟ್ಟೆ ಹೇರುವಾಗ್ಯೆ ನಿಚ್ಚಣಿಕೆ ಹಚ್ಚ ಬೇಕಾಗುವದು. ಅದರ ಶರೀರ ಪ್ರಮಾಣದಿಂದ ನೋಡಿದರೆ, ಅದರ ತಲೆಯು ಬಹು ಚಿಕ್ಕದ್ದು. ಅರ್ಬಸ್ಥಾನದೊಳಗಿನ ಜನರು ಅದರ ಹಾಲು ಕುಡಿದು ಜೀವಿಸುತ್ತಾರೆ. ವರ್ಷಕ್ಕೊಮ್ಮೆ ಅದರ ಉಣ್ಣೆ ಕತ್ತರಿಸಿಕೊಂಡು, ವಸ್ತ್ರಗಳನ್ನು ಮಾಡುತ್ತಾರೆ. ಅದರ ಕಾಲುಗಳು ಬಲವುಳ್ಳವುಗಳಾಗಿಯೂ ಮೆತ್ತಗಾಗಿಯೂ ಇದ್ದದರಿಂದ, ಅದಕ್ಕೆ ಬಿಸಲೊಳಗೆ ಉಸಬಿನ ಮೇಲಿಂದ ನಡಿಯಲಿಕ್ಕೆ ಬರುತ್ತದೆ.

ಒಂಟೆಗೆ ಬಹಳ ದಿವಸ ಆಹಾರ ದೊರಿಯದೆ ಹೋದರೆ, ಅದರ ಡುಬ್ಬದ ಗಂಟು ಕಡಿಮೆಯಾಗುತ್ತ ಹೋಗುತ್ತದೆ. ಅದು ದುರ್ಗಮವಾದ ಅರಣ್ಯದೊಳಗಿಂದಾದರೂ ಭಾರ ಹೊತ್ತು ಕೊಂಡು ನಡಿಯುವ ಕಾರಣ, ಅದಕ್ಕೆ "ಅರಣ್ಯನಾವೆ" ಎಂಬ ಹೆಸರು ಉಂಟಾಗಿದೆ. ಕೆಲವು ದೇಶಗಳಲ್ಲಿ ಸರ್ವ ವ್ಯಾಪಾರವು ಒಂಟೆಯಿಂದ ನಡಿಯುವದುಂಟು.

18. The Banyan tree.

೧೮. ವಟವೃಕ್ಷ.

ವಟವೃಕ್ಷವು ಯಾವ ಬೀಜದಿಂದ ಆಗುತ್ತದೆಯೋ ಅದು ರಾಗಿಯ ಕಾಳಿಗಿಂತಲೂ ಬಹು ಸಣ್ಣದಾಗಿರುತ್ತದೆ. ಕೇವಲ ಅದರ ಬೀಜ ನೋಡಿದರೆ, ಅದರಿಂದ ವಟವೃಕ್ಷದಂಥ ದೊಡ್ಡ ಗಿಡವು ಹ್ಯಾಗೆ ಆಗುತಿದ್ದೀತು ಎಂಬದಾಗಿ ಆಶ್ಚರ್ಯ ಉಂಟಾಗುತ್ತದೆ. ಅದರಿಂದ ಆಗುವ ಹಣ್ಣುಗಳು ಪಕ್ಷಿಗಳಿಗೆ ಹೊರ್ತು ಮನುಷ್ಯರಿಗೆ ತಿನ್ನಲಿಕ್ಕೆ ಬಾರದಿದ್ದರೂ, ಅದರ ನೆರಳಿಗೆ ಕೂತು, ಜನರು ತಮ್ಮ ಬೇಸರ ಕಳಿದು ಕೊಳ್ಳುತ್ತಾರೆ. ಅಂಜೂರದ ಗಿಡಗಳೂ, ಅತ್ತೀ ಗಿಡಗಳೂ, ವಟವೃಕ್ಷಗಳೂ, ಇವೆಲ್ಲಾ ಒಂದೇ ಜಾತಿಯ ಗಿಡಗಳೆಂದು ವಿದ್ವಾಂಸರು ತಿಳಿಯುತ್ತಾರೆ. ಅವುಗಳ ಎಲೆಗಳು ಪತ್ರಾವಳಿಗಳನ್ನು ಮಾಡಲಿಕ್ಕೆ ಬರುತ್ತವೆ.

ಗುಜರಾಥ ದೇಶದೊಳಗೆ ನರ್ಮದಾ ನದಿಯ ದಂಡಿಯಲ್ಲಿ ಒಂದು ವಟವೃಕ್ಷವಿದೆ. ಅದಕ್ಕೆ ಮುನ್ನೂರುವರೆ ನೂರು ಮರಿಗಿಡಗಳಾಗಿ, ಒಂದಕ್ಕೊಂದು ಕೂಡಿ, ಒಂದು ಗಿಡದಂತೆ ಕಾಣುತ್ತವೆ. ಒಂದೊಂದು ಮರಿಗಿಡಕ್ಕೆ ಬೇರುಗಳಾಗಿ, ಭೂಮಿಯಲ್ಲಿ ಪ್ರವೇಶಿಸಿ, ಮೂರು ಸಾವಿರ ಹೊಸ ಗಿಡಗಳು ಆಗಿವೆ. ಆ ಗಿಡಗಳಿಗೆ ದಿನದಿನಕ್ಕೆ ಹೊಸ ಹೊಸ ಕೊಂಬೆಗಳೂ ಬೇರುಗಳೂ ಆಗುತ್ತ ನಡಿದವೆ. ದೊಡ್ಡ ಗಿಡದ ಸುತ್ತಳತೆಯು ಹೆಚ್ಚು ಕಡಿಮೆ ಎರಡು ಸಾವಿರ ಅಡಿಗಳು. ಆ ಮರದ ನೆರಳಿನ ಕೆಳಗೆ ಏಳು ಸಾವಿರ ಜನರು ಆಯಾಸವಿಲ್ಲದೆ ಮಲಗುತ್ತಾರೆ. ಅದು ದೂರದಿಂದ ನೋಡಿದರೆ, ಗಿಡದಂತೆ ಕಾಣುವದಿಲ್ಲ, ಒಂದು ದೊಡ್ಡ ಅರಣ್ಯದಂತೆ ಕಾಣುತ್ತದೆ. ಒಂದು ಚಿಕ್ಕ ಬೀಜದಿಂದ ಇಂಥ ಗಗನಚುಂಬಿತ ಮರವಾಗುವದು ಎಷ್ಟು ಆಶ್ಚರ್ಯ! ಅದರೊಳಗೆ ಪಾರಿವಾಳ, ನವಿಲು, ಕೋತಿ ಮೊದಲಾದವುಗಳು ವಾಸ ಮಾಡುತ್ತವೆ. ಅಲ್ಲಿ ಇರುವ ಕಣ್ಣು ಕಪ್ಪಡೆಗಳು ಬಹಳ ದೊಡ್ಡವು. ಈ ರೆಕ್ಕೆಯ ತುದಿಯಿಂದ ಆ ರೆಕ್ಕೆಯ ತುದಿಗೆ ಒಂದೊಂದರ ಉದ್ದಳತೆ ಆರು ಏಳು ಅಡಿಗಳು.

19. Silver.

೧೯. ಬೆಳ್ಳಿ.

ಬೆಳ್ಳಿಯು ನೀರಿಗಿಂತ ಹತ್ತು ಪಾಲು ಜಡವಾದದ್ದು. ಅದು ಸಾಧಾರಣವಾಗಿ ಯುರೋಪು, ಆಸ್ಯ, ಮತ್ತು ಅಮೇರಿಕ, ಈ ಮೂರು ಖಂಡಗಳಲ್ಲಿ ದೊರಿಯುತ್ತದೆ. ಬೆಳ್ಳಿಯನ್ನು ಬೆಂಕಿಯಲ್ಲಿ ಇಟ್ಟು ಕರಗಿಸುವಾಗ್ಯೆ ಹಸರು ಜ್ವಾಲೆ ಕಾಣಿಸುತ್ತದೆ. ಅಮೇರಿಕ ಖಂಡದಲ್ಲಿ ಪೊಟಾಶಿ ಎಂಬ ಹೆಸರಿನ ಗುಡ್ಡವಿದೆ. ಅದರ ಸುತ್ತಳತೆ ಸುಮಾರು ಹತ್ತು ಹರದಾರಿ; ಅಷ್ಟರೊಳಗೆ ಮುನ್ನೂರು ನಾಲ್ಕು ನೂರು ಖಣಿಗಳವೆ. ಅವೆಲ್ಲವುಗಳೊಳಗಿಂದ ವರ್ಷಕ್ಕೆ ಮೂರು ಕೋಟಿ ರೂಪಾಯಿಗಳ ಬೆಳ್ಳಿ ಉ

ತ್ಪನ್ನವಾಗುತ್ತದೆ. ಜನರು ಬೆಳ್ಳಿಯಿಂದ ನಾಣ್ಯಗಳನ್ನೂ ತಬಕಗಳನ್ನೂ ಬಟ್ಲಗಳನ್ನೂ ಅಲಂಕಾರಗಳನ್ನೂ ಮಾಡುತ್ತಾರೆ. ಬೆಳ್ಳಿಯೊಳಗೆ ಸ್ವಲ್ಪ ತಾಂಬ್ರ ಕೂಡಿಸಿದರೂ, ಅದರ ಬಿಳಪು ಕಡಿಮೆಯಾಗುವದಿಲ್ಲ. ಬೆಳ್ಳಿಯಾದರೂ ಭಂಗಾರದಂತೆ ಬೇಕಾದಷ್ಟು ಬಡಿದು ಹಿಗ್ಗಿಸಿದರೆ ಹಿಗ್ಗಿ, ಮನುಷ್ಯನ ಕೂದಲಿಗಿಂತ ಸೂಕ್ಷ್ಮವಾದ ತಂತಿ ಮಾಡಲಿಕ್ಕೆ ಬರುತ್ತದೆ. ಒಂದು ಗುಂಜಿ ತೂಕ ಬೆಳ್ಳಿ ಇದ್ದರೆ, ಹೆಚ್ಚು ಕಡಿಮೆ ಮುನ್ನೂರು ಮೊಳ ಉದ್ದ ತಂತಿಯಾಗ ಬಹುದು. ಇಂಥಾ ತಂತಿಯ ಮೇಲೆ ಭಂಗಾರದ ನೀರು ಕೊಟ್ಟರೆ, ಜರವಾಗುತ್ತದೆ.

20. The Stag drinking Water.

೨೦. ನೀರಿನಲ್ಲಿ ನೆರಳು ನೋಡಿ ಕೊಂಡ ಸಾರಂಗ.

ಒಂದಾನೊಂದು ಸಾರಂಗವು ಹೊಳೆಯಲ್ಲಿ ನೀರು ಕುಡಿಯುತ್ತಿರುವ ಸಮಯದಲ್ಲಿ, ಹರಿಯುವ ನೀರಿನಲ್ಲಿ ತನ್ನ ನೆರಳನ್ನು ಕಂಡು, ತನ್ನ ಕಾಲು ಮೊದಲುಗೊಂಡು ತಲೆಯ ಪರ್ಯಂತರ ಅವಯವಗಳನ್ನು ಪ್ರತ್ಯಪ್ರತ್ಯೇಕವಾಗಿ ನೋಡಿ, "ಆಹಹ! ಈ ನನ್ನ ತಲೆಯ ಮೇಲಿನ ಕೊಂಬುಗಳೆಷ್ಟು ಚನ್ನಾಗಿವೆ, ನನ್ನ ಮುಖವು ಬಹು ಶೋಭಾಯಮಾನವಾಗಿದೆ, ನನ್ನ ನೇತ್ರಗಳು ಕಮಲದಳಗಳನ್ನು ನಾಚಿಸುತ್ತವೆ, ನನ್ನ ಶರೀರವು ಅರಳಿದ ಪುಷ್ಪದಂತೆ ತೋರುತ್ತದೆ. ಇವುಗಳಂತೆ ನನ್ನ ಕಾಲುಗಳು ಸಹ ಚನ್ನಾಗಿದ್ದರೆ, ನಾನು ಯಾರ್ಯಾರನ್ನು ಲಕ್ಷ್ಯ ಮಾಡೆನು; ಆದರೆ ನಾನೇನು ಮಾಡಲಿ? ಈ ಕಾಲುಗಳಿಗೋಸ್ಕರವಾಗಿ ನಾಚಿಕೆ ಪಡ ಬೇಕಾಗಿದೆ. ಇಂಥ ಕಾಲುಗಳನ್ನು ಪಡಿದು ಕೊಂಡಿರುವದಕ್ಕಿಂತಲು ಕಾಲುಗಳಿಲ್ಲದೆ ಇರುವದು ಉತ್ತಮು" ಎಂದು ಚಿಂತಿಸುತ್ತಿರುವ ಸಮಯದಲ್ಲಿ, ಬೇಟೆಯ ನಾಯಿಗಳು ಬೆನ್ನು ಹತ್ತಿ ಬಂದವು. ಅದನ್ನು ಕಂಡು, ಆ ಸಾರಂಗವು ಗುಡ್ಡ ಬಿದ್ದು ಓಡುತ್ತಿರಲಾಗಿ, ಅದರ ಕೊಂಬುಗಳು ಒಂದು ಗಿಡಕ್ಕೆ ಶಿಕ್ಕಿ ಕೊಂ

ಡದ್ದರಿಂದ, ಮುಂದಕ್ಕೆ ಹೋಗಲಾರದೆ ನಿಂತು ಕೊಂಡಿತು. ಇಷ್ಟರಲ್ಲಿ ಬೇಟೆಯ ನಾಯಿಗಳು ಬಂದು ಅದನ್ನು ಹಿಡಿದು ಕೊಳ್ಳುವಾಗ್ಯೆ, ಸಾರಂಗವು ತನ್ನ ಮನಸ್ಸಿನಲ್ಲಿ ಚಿಂತಿಸುತ್ತದೆ: "ಎಲಾ! ನನಗೆ ಅಸಹ್ಯವಾಗಿ ತೋರಿದ ಕಾಲುಗಳೇ ನನ್ನನ್ನು ಇಲ್ಲಿ ಮಟ್ಟಿಗಾದರು ಸಂರಕ್ಷಣೆ ಮಾಡಿದವು; ಆದರೆ ನಾನು ನೋಡಿ ಹಿಗ್ಗಿದ ಕೊಂಬುಗಳು ನನ್ನ ನಾಶಕ್ಕೆ ಕಾರಣವಾದವು."

21. The two Brothers (Anapias and Amphinomus).

೨೧. ಇಬ್ಬರು ಅಣ್ಣ ತಮ್ಮಂದಿರು.

ಯುರೋಪ ಖಂಡದೊಳಗೆ ಸಿಸಿಲಿ ಎಂಬ ಹೆಸರಿನದೊಂದು ದ್ವೀಪ ಉಂಟು. ಅದರಲ್ಲಿ ಎಟ್ಣಾ ಎಂಬದೊಂದು ದೊಡ್ಡ ಜ್ವಾಲಾಮುಖಿ ಗುಡ್ಡವಿರುತ್ತದೆ. ಆ ಗುಡ್ಡ ಪೊಳ್ಳು ಇದ್ದು, ಅದರಲ್ಲಿ ಗಂಧಕ, ಸೋರುಪ್ಪು, ಇದ್ದಲಿ, ಕಲ್ಲು, ಕಬ್ಬಿಣ ಮೊದಲಾದ ಜೀನಸುಗಳು ತುಂಬಿ, ಯಾವಾಗಲೂ ಕುದಿಯುತ್ತ ಇರುವ ಒಂದು ಗುಂಡವದೆ. ಆ ಗುಂಡದೊಳಗಿಂದ ಕಾಲ ಕಾಲಕ್ಕೆ ಬೆಂಕಿ ಪುಟವಾಗಿ, ಕಲ್ಲು ಮೊದಲಾದವುಗಳು ಗುಡ್ಡದ ತುದಿಗೆ ಇರುವ ಬಾಯಿಯೊಳಗಿಂದ ಹಾರಿ, ಕರಗಿದ ಕಬ್ಬಿಣದಂತೆ ಸುತ್ತ ಮುತ್ತ ಆ ಗುಡ್ಡದಿಂದ ಇಳಿದು, ಒಂದೆರಡು ಹರದಾರಿಗಳ ಪರಿಯಂತ್ರ ಹರಿಯುತ್ತದೆ. ಹೀಗೆ ಕೆಲವು ವರ್ಷಗಳ ಕೆಳಗೆ ಒಂದು ದಿವಸ ಆ ಗುಡ್ಡವು ಒಡಿದು, ಬೆಂಕಿಯ ನದಿಗಳು ಹರಿದು, ಬೂದಿ ಹೊಗೆ ಆಕಾಶಕ್ಕೆ ಹಾರಿ, ಕತ್ತಲು ಮುಸಗಿ ಕೊಂಡು, ಪ್ರಳಯ ನಡದಿರಲಾಗಿ, ಸುತ್ತ ಮುತ್ತ ವಾಸ ಮಾಡಿ ಕೊಂಡಿದ್ದ ಜನರು ತಮ್ಮ ತಮ್ಮ ದ್ರವ್ಯವನ್ನೆಲ್ಲ ತೆಗದು ಕೊಂಡು ಓಡಿ ಹೋದರು. ಆದರೆ ಇಬ್ಬರು ಅಣ್ಣ ತಮ್ಮಂದಿರಿದ್ದರು, ಅವರು ಬೆಳ್ಳಿ ಭಂಗಾರವನ್ನು ಬಿಟ್ಟು ಓಡಿ ಹೋಗಲಾರದ ತಮ್ಮ ತಂದೆತಾಯಿಗಳನ್ನು ಬೆನ್ನು ಮೇಲೆ ಹೊತ್ತು ಕೊಂಡು ಹೋಗುತ್ತಿದ್ದರು. ಅದನ್ನು ಕಂಡವರು ಬಹು ಆಶರ್ಯ ಪಟ್ಟು ಕೊಂಡಾಡಿದರು. ಅವರು ಹೋದ

ಹಾದಿಯಲ್ಲಿ ಬೆಂಕಿಯ ನದಿಯು ಹರಿಯದೆ, ಸುತ್ತ ಮುತ್ತಲು ಎಲ್ಲ ಸುಟ್ಟು ಹೋದಾಗ್ಯೂ ಅಲ್ಲಿ ಹಸುರಾಗಿ ಉಳಿದಿತ್ತು. ಜನರು ಆ ಅದ್ಭುತ ಚಮತ್ಕಾರವು ಈ ಯೌವನಸ್ಥರ ಪುಣ್ಯದಿಂದ ಆಯಿತೆಂದು ನೆನಸಿ, ಆ ಸ್ಥಳಕ್ಕೆ "ಪುಣ್ಯವಂತರ ಭೂಮಿ" ಎಂದು ಹೆಸರಿಟ್ಟರು.

22. My Father.

೨೨. ನನ್ನ ತಂದೆ.

ಭಾಮಿನಿ.

ಶುದ್ಧ ಶಿಶುವಾಗಿರುವ ಸಮಯದಿ
ಮುದ್ದು ಮಗು ಬಾರೆನುತ ಮಮತಿಲಿ
ಮುದ್ದುನಿಟ್ಟಾಡಿಸುತ ಬೆಳಿಸಿದರಾರು ಪ್ರತಿ ದಿನದಿ? ||
ಸಿದ್ಧ ಪಡಿಸಿದರಾರು? ಬೇಕಾ—
ಗಿದ್ದ ವಸ್ತುಗಳೆನಗೆ ಪರಿಪರಿ,
ಉದ್ಧರುಷದಲಿ ಕಾದರಾರ್‍ಯೆ ತಂದಿಯಲ್ಲದಿರೆ? || ೧ ||

ಕಂದತನ ವಿಾರ್ದಂದಿಗತಿ ಶ್ರಮ—
ದಿಂದ ಧೂಳಾಕ್ಷರಗಳೋದಿಸಿ,
ಮುಂದೆ ಸಾಲಿಗೆ ಕಳುಪಿ ಹೊತ್ತಿಗೆ ಕಾಗದಗಳಿತ್ತು ||
ಬಂದ ಮೇಲ್ನಿಜ ಮಂದಿರದೊಳಾ—
ನಂದದಿಂ ಪಾಠವನು ಕೇಳುತ
ಚಂದದಿಂ ಬೋಧಿಸಿದರಾರ್‍ಯೆ ತಂದಿಯಲ್ಲದಿರೆ? || ೨ ||

ಬಳಿಕ ವಿದ್ವಾಂಸನ್ನ ಮಾಡಿಸಿ,
ಹಲವು ಮಾರ್ಗದಲಿದ್ದ ಮರ್ಮವ
ತಿಳುಪಿದವರಾರೆನಗೆ ಕೀರ್ತಿಯು ಶೀಘ್ರ ದೊರಿವಂತೆ? ||

ಬಲು ಬಗೆಯಲೀ ವಿಧದಿ ಪ್ರೇಮದಿ
ಸಲುಹಿರಲು ಮರಿತನ್ಯ ಜನಗಳಿ
ಗೊಲಿಯುವನೆ ನಾನೆಂದಿಗಾದರು ತಂದಿಗಲ್ಲದಿರೆ? || ೩ ||


23. Letter from a Schoolboy to his Mother.

೨೩. ಮಗನು ತಾಯಿಗೆ ಬರೆದ ಪತ್ರ.

ಬಹು ಪ್ರೀತಿಯುಳ್ಳ ಮಾತೋಶ್ರೀಯವರ ಸಮುಖಕ್ಕೆ.—ಬಾಲಕ ರಂಗನು ಚರಣಕ್ಕೆರಗಿ, ಮಾಡುವ ಶಿರಸಾಷ್ಟಾಂಗ ನಮಸ್ಕಾರವು. ಅದಾಗಿ ಈಗ ಚೈತ್ರ ಶುದ್ಧ ೧೫ ವರಿಗೆ ತಮ್ಮ ಅನುಗ್ರಹದಿಂದ ಕ್ಷೇಮದೊಳಿದ್ದೇನೆ. ತರುವಾಯ ತಮ್ಮ ಚರಣಸನ್ನಿಧಾನದಿಂದ ಈ ಊರಿಗೆ ಹೊರಟು ಬರುವಾಗ್ಯೆ ನನ್ನನ್ನು ಎದಿಗಪ್ಪಿ, ಕಣ್ಣಿಗೆ ನೀರು ತಂದು, "ಬಾಲಕನೇ ಚನ್ನಾಗಿ ಇರು, ಚನ್ನಾಗಿ ವಿದ್ಯೆಯನ್ನು ಕಲಿತು ಬಾ" ಎಂದು ಪರಿಪರಿಯಿಂದ ಹೇಳಿದ ಬುದ್ಧಿಯ ಮಾತುಗಳನ್ನು ನಾನೆಂದಿಗೂ ಮರಿಯಲಾರೆ. ನಾನು ಈಗ ಏಳು ಎಂಟು ದಿವಸಗಳ ಹಿಂದೆ, ಬಹು ಮಮತೆಯುಳ್ಳ ತಂದಿಯಂದಿರಿಗೆ ಒಂದು ಪತ್ರ ಬರೆದು ಇದ್ದೇನೆ. ಅದು ಬಂದು ಮುಟ್ಟಿ ಸಮಾಚಾರವೆಲ್ಲ ತಿಳಿದಿರ ಬಹುದು. ಈಗ ನಾನು ಕನ್ನಡ ಮೊದಲನೇ ಪುಸ್ತಕವನ್ನೆಲ್ಲ ತೀರಿಸಿ, ಎರಡನೇ ಪುಸ್ತಕ ಆರಂಭ ಮಾಡಿದ್ದೇನೆ. ಇದನ್ನು ಕೇಳಿ ತಮಗೆ ಆನಂದವಾಗದೆ ಇರಲಾರದು. ಹಿರಿಯರು ನನ್ನ ಹಿಂದಿನ ಪತ್ರಕ್ಕೆ ಉತ್ತರ ಬರಿಯುವಾಗ್ಯೆ, ಮನೆಯಲ್ಲಿ ಭಾಗಿರಥಿ ಮೊದಲಾದವರು ಕ್ಷೇಮವಾಗಿದ್ದದನ್ನು ಬರಿಸ ಬೇಕು. ಚಿಕ್ಕತನ ಮೊದಲು ಮಾಡಿ ಕೊಂಡು ಬಹು ಪ್ರಯಾಸ ಪಟ್ಟು ನನ್ನನ್ನು ಇಲ್ಲಿ ಮಟ್ಟಿಗೆ ಬೆಳಿಸಿದ ಉಪಕಾರಕ್ಕೆ ಬದಲಾಗಿ ನಾನು ತಮಗೇನು ಕೊಡಲಾರೆನು. ಆದರೆ ಚನ್ನಾಗಿ ವಿದ್ಯಾಭ್ಯಾಸ ಮಾಡಿ, ಸದ್ಗುಣದಿಂದಲೂ ತಮ್ಮ ಆಜ್ಞೆಯಿಂದಲೂ ನಡಿದು ಕೊಳ್ಳುತ್ತ, ತಮಗೆ ಆನಂದವಾಗುವಂತೆ ಇರ ಬೇಕೆಂಬುವ ಆಶೆ ಬಹಳವಾಗಿದೆ, ತಿಳಿಯ ಬೇಕು. ಇತಿ ಶಿರಸಾಷ್ಟಾಂಗ ನಮಸ್ಕಾರ.

24. The Elephant.

೨೪. ಆನೆ.




ಪೃಥ್ವಿಯಲ್ಲಿರುವ ಸಕಲ ಮೃಗಗಳೊಳಗೆ ಆನೆಯು ಬಹು ದೊಡ್ಡದು. ಅದರ ತೊಗಲು ದಪ್ಪಾಗಿಯೂ, ಕಾಲುಗಳು ಗುಂಡಾಗಿಯೂ ಅವೆ. ಅದರ ಶರೀರದ ಪ್ರಮಾಣಕ್ಕೆ ಅದರ ಕಣ್ಣುಗಳು ಬಹು ಚಿಕ್ಕವು; ಆದರೂ ಬೇಕಾದಷ್ಟು ಸೂಕ್ಷ್ಮವಾದ ಪದಾರ್ಥಗಳು ಅದಕ್ಕೆ ಕಾಣಿಸುತ್ತವೆ. ಅದರ ಕಿವಿಗಳು ಮೊರದಷ್ಟು ದೊಡ್ಡವು. ಅದು ತನ್ನ ಸೊಂಡಿಲದಿಂದ ವನಸ್ಪತಿಗಳನ್ನು ಕಿತ್ತು ತಿಂದು, ನೀರನ್ನು ಹೀರಿ ಕುಡಿಯುತ್ತದೆ. ಸೊಂಡಿಲದ ಬುಡವು ದಪ್ಪವಾಗಿದ್ದರೂ, ಅದರಿಂದ ಕಣ್ಣಿಗೆ ಕಾಣಿಸದ ಸಣ್ಣ ವಸ್ತುಗಳನ್ನು ಎತ್ತಿ ಕೊಳ್ಳುವದು. ಈ ದೇಶದಲ್ಲಿ ಗಂಡು ಆನೆಗಳಿಗೆ ಮಾತ್ರ ಕೋರೆಗಳುಂಟು. ಆದರೆ ಅಫ್ರಿಕ ಖಂಡದೊಳಗಿನ ಹೆಣ್ಣು ಆನೆಗಳಿಗೂ ಕೋರೆಗಳಿರುತ್ತವೆ. ಆನೆಯ ಮೇಲೆ ಹತ್ತುವಾಗ ಮೊಣಕಾಲನ್ನು ಮಣಿಸುವಂತೆ ಅದಕ್ಕೆ ಕಲಿಸಿರುತ್ತಾರೆ. ಕೆಲವು ಸಮಯಗಳಲ್ಲಿ ಹತ್ತುವದಕ್ಕೆ ಶಕ್ತಿ ಇಲ್ಲದವರನ್ನು ಅದು ತನ್ನ ಸೊಂಡಿಲದಿಂದ ಎತ್ತಿ, ಮೇಲೆ ಹತ್ತಿಸಿ ಕೊಳ್ಳುವದುಂಟು. ಗುಂಡು ಮದ್ದು ಇಲ್ಲದ ಹಿಂದೂ ಪಾಳ್ಯಗಾರರ ಕಾಲದಲ್ಲಿ ಆನೆಗಳಿಗೆ ಸಾಧಾರಣವಾಗಿ ಯುದ್ಧಾಭ್ಯಾಸ ಮಾ

ಡಿಸಿ, ಸಮರಂಗಣಕ್ಕೆ ತೆಗದು ಕೊಂಡು ಹೋದದ್ದುಂಟು. ಈ ಕಾಲದಲ್ಲಿ ಅವು ಮುಖ್ಯವಾಗಿ ಹೊರೆ ಹೇರುವದಕ್ಕೂ, ಅಂಬಾರಿ ಇಟ್ಟು ಹತ್ತುವದಕ್ಕೂ ಬರುತ್ತವೆ. ಧೊರೆಗಳು ಹತ್ತುವ ಆನೆಗೆ ಪಟ್ಟದಾನೆ ಎಂಬ ಹೆಸರು. ಆನೆಗಳೊಳಗೆ ಕೆಲವು ನೂರ ಇಪ್ಪತ್ತು ವರ್ಷಗಳ ಮಟ್ಟಿಗೆ ಬದುಕುತ್ತವೆ.

25. The Mango tree.

೨೫. ಮಾವಿನ ಗಿಡ.



ಮಾವಿನ ಗಿಡವು ಉಷ್ಣ ದೇಶಗಳಲ್ಲಿ ವಿಶೇಷವಾಗಿ ಆಗುತ್ತದೆ. ಅನ್ಯ ದೇಶಕ್ಕಿಂತಲು ಭರತ ಖಂಡದೊಳಗೆ ಮಾವಿನ ಗಿಡಗಳು ಬಹಳ. ಅವು ಅರಣ್ಯದಲ್ಲಿಯೂ ಗುಡ್ಡದಲ್ಲಿಯೂ ತಮ್ಮಿಂದ ತಾವೇ ಹುಟ್ಟುತ್ತವೆ. ಮಾವಿನೊಳಗೆ ಅನೇಕ ಪ್ರಕಾರಗಳು; ಅವುಗಳೊಳಗೆ ಮುಖ್ಯವಾದವುಗಳು ಯಾವೆಂದರೆ: ಶೀಮಾವು, ಹುಳಿಮಾವು, ಗಿಣಿಮಾವು, ಮಗಿಮಾವು, ಗುಂಗಿಮಾವು, ಜೀರಿಗೆಮಾವು. ಈ ದೇಶದಲ್ಲಿ ಅನೇಕ ಸ್ಥಳಗಳಲ್ಲಿ ಮಾವಿನ ತೋಪುಗಳವೆ. ಮಾವಿನ ಮರವು ವರ್ಷಕ್ಕೆ ಒಂದು ಸಾರಿ ಫಲ ಫಲಿಸುತ್ತದೆ. ಅದಕ್ಕೆ ಮಾಘ ಮಾಸದಲ್ಲಿ ಹೂವು ಬಿಟ್ಟು, ಮೂರು

ನಾಲ್ಕು ತಿಂಗಳುಗಳಲ್ಲಿ ಹಣ್ಣು ಆಗುತ್ತವೆ. ಅದರ ಸುಗ್ಗಿ ಶ್ರಾವಣ ಮಾಸದ ವರಿಗೆ. ಹೂವು ಬಿಟ್ಟಷ್ಟೆಲ್ಲ ಕಾಯಿ ಆದರೆ, ಗಿಡ ಹೊರಲಾರದೆ ಹೋದೀತು. ಎಷ್ಟೋ ಹೂವು ಘಾಳಿಯಿಂದ ಉದರಿ ಹೋಗುತ್ತವೆ. ಬಿಸಲುಗಾಲದಲ್ಲಿ ಪಾಂಥಸ್ಥರು ಮಾವಿನ ಮರದ ನೆರಳಿಗೆ ಬಂದು ಕೂತು, ಆಸರ ಕಳಿದು ಕೊಳ್ಳುತ್ತಾರೆ. ಮಾವಿನ ಸುಗ್ಗಿಯಲ್ಲಿ ಬಡವರು ಕೇವಲ ಮಾವಿನ ಹಣ್ಣಿನಿಂದ ಬದುಕುತ್ತಾರೆ. ಮಾವಿನ ಕಾಯಿಯಿಂದ ಒಳ್ಳೆ ಉಪ್ಪಿನ ಕಾಯಿಯಾಗುತ್ತದೆ. ಹಣ್ಣು ತಿನ್ನಲಿಕ್ಕೂ ಶೀಕರಣೆ ಮಾಡಲಿಕ್ಕೂ ಬರುತ್ತದೆ. ಮಾವಿನ ಕಟ್ಟಿಗೆಯಿಂದ ಮನೆ ಹಾಕುತ್ತಾರೆ.

26. Copper.

೨೬. ತಾಂಬ್ರ.

ತಾಂಬ್ರವು ನೀರಿಗಿಂತ ಒಂಭತ್ತು ಪಾಲು ಜಡವಾದದ್ದು. ಎಲ್ಲ ಧಾತುಗಳಿಗಿಂತ ತಾಂಬ್ರದ ಮೇಲೆ ಸುತ್ತಗಿಯ ಪೆಟ್ಟು ಹೊಡಿದರೆ, ಹೆಚ್ಚು ಸಪ್ಪಳ ಆಗುತ್ತದೆ. ತಾಂಬ್ರವು ಸಾಧಾರಣವಾಗಿ ಪೃಥ್ವಿಯ ಎಲ್ಲ ಖಂಡಗಳೊಳಗೂ ದೊರಿಯುತ್ತದೆ. ತಾಂಬ್ರಪತ್ರಗಳು ಮನೆಗಳ ಮೇಲೆ ಹಾಕಲಿಕ್ಕೆ ಬರುತ್ತವೆ. ಅದರ ಹೊರ್ತು ಅಂಬಿಗರು ಅವನ್ನು ಹಡಗದ ಬುಡಭಾಗಕ್ಕೆ ಬಡಿಯುತ್ತಾರೆ; ಹಾಗೆ ಬಡಿದರೆ ನೀರಿನ ಮೇಲಿಂದ ಹಡಗಗಳು ತೀವ್ರ ಗಮನ ಮಾಡುವದಲ್ಲದೆ, ಸಮುದ್ರದೊಳಗಿನ ಹುಳಗಳು ಅದಕ್ಕೆ ಹತ್ತುವದಿಲ್ಲ. ತಾಂಬ್ರಪತ್ರಗಳ ಮೇಲೆ ಚಿತ್ರ ತೆಗಿಯಲಿಕ್ಕೆ ಬಹಳ ಚನ್ನಾಗಿ ಬರುತ್ತದೆ.

ಜನರು ತಾಂಬ್ರದಿಂದ ಭಾಂಡಿಗಳನ್ನು ಮಾಡುತ್ತಾರೆ. ಸರಕಾರದವರು ತಾಂಬ್ರದ ಮೇಲೆ ತಮ್ಮ ಮುದ್ರಿಕೆಯನ್ನು ಹಾಕಿ, ನಾಣ್ಯ ಮಾಡುತ್ತಾರೆ. ತಾಂಬ್ರದ ಭಾಂಡಿಗಳಿಗೆ ಕಲಾಯ ಮಾಡಿಸಿ, ಅಡಿಗೆ ಮಾಡಬೇಕು; ಹಾಗೆಯೇ ಮಾಡಿದರೆ, ವಿಷ ಬಿಟ್ಟು, ಆಹಾರದೊಳಗೆ ಕೂಡಿಕೊಳ್ಳುವದು. ತೋಪುಗಳನ್ನು ಮಾಡುವ ತಾಂಬ್ರದೊಳಗೆ ನೂರು

ಪಾಲು ತಾಂಬ್ರ, ಎಂಟು ಹತ್ತು ಪಾಲು ತವರ ಇರುತ್ತದೆ. ಮತ್ತು ಘಂಟೆ ಮಾಡುವ ತಾಂಬ್ರದೊಳಗೆ ಮೂರು ಪಾಲು ತಾಂಬ್ರ, ಒಂದು ಪಾಲು ತವರ ಇರುತ್ತದೆ.

27. The Horse and the Ass.

೨೭. ಕುದುರೆಯೂ ಕತ್ತೆಯೂ.

ಒಬ್ಬ ಶಿಪಾಯಿಯು ತನ್ನ ಕುದುರೆಗೆ ಜರದ ಜೀನು ಹಾಕಿ ಕೊಂಡು ಹೋಗುತ್ತಿರಲಾಗಿ, ಆ ಕುದುರೆಯು ತನ್ನ ಲಗಾಮು ಕಡಿದು, ಹೂಂಕರಿಸುತ್ತ ಒಯ್ಯಾರವಾಗಿ ಹೋಗುತ್ತಿರಲು, ಅದೇ ಮಾರ್ಗದಿಂದ ಒಂದು ಕತ್ತೆಯು ಹೊರೆಯನ್ನು ಹೊತ್ತು ಕೊಂಡು, ಭಾರದಿಂದ ಮೆಲ್ಲ ಮೆಲ್ಲನೆ ನಡೆಯುತ್ತ ಬರುವದನ್ನು ಕುದುರೆಯು ಕಂಡು, ಅಹಂಕಾರದಿಂದ ಆ ಕತ್ತೆಯನ್ನು ನೋಡಿ, "ಎಲಾ, ಸರೀ ಸರೀ, ದಾರಿಯನ್ನು ಬಿಟ್ಟು ವಾರಿಗೆ ಹೋಗು, ಇಲ್ಲದಿದ್ದರೆ ನಿನ್ನನ್ನು ಕಾಲಿನಿಂದ ತುಳಿದು ಬಿಡುವೆನು" ಎನಲಾಗಿ, ಆ ಕತ್ತೆಯು ದುರ್ಬಲ ಜೀವಿಯಾದದರಿಂದ ಆ ಕುದುರೆಯ ಸಂಗಡ ಎದುರಿಸಿ ಜೈಸುವದು ಕಷ್ಟವೆಂದು ತಿಳಿದು, ಘಾಬರಿಯಾಗಿ ಒಂದು ಕಡಿಯಿಂದ ಹೋಯಿತು. ಕೆಲವು ದಿವಸಗಳ ಮೇಲೆ ಆ ಕುದುರೆಗೆ ಲಡಾಯಿಯೊಳಗೆ ಗುಂಡು ತಗಲಿ, ಘಾಯವಾಗಿ, ಕೆಲಸಕ್ಕೆ ಬಾರದಂತೆ ಆಗಿ ಹೋದದರಿಂದ ಆ ಶಿಪಾಯಿಯು ಅದನ್ನು ಬಾಡಿಗೆ ಕಟ್ಟುವವನಿಗೆ ಮಾರಲು, ಆ ವ್ಯವಹಾರಿಯು ಆ ಕುದುರೆಯ ಮೇಲೆ ಕಂಟ್ಲೆಯನ್ನು ಹೇರಿ ಕೊಂಡು ಬರುತ್ತಿರಲಾಗಿ, ಆ ಕತ್ತೆಯು ಈ ಕುದುರೆಯನ್ನು ಕಂಡು, "ಅಪ್ಪನವರೇ, ನಿಮಗೆ ನಮಸ್ಕಾರ, ಪೂರ್ವದಲ್ಲಿ ಒಮ್ಮೆ ಕಾಲಿನಿಂದ ತುಳಿದು ಬಿಟ್ಟೇವೆಂದು ಅಂದವರು ತಾವೇಯಲ್ಲವೋ? ಎಂದಾದರು ನಿಮ್ಮ ಗರ್ವ ಭಂಗವಾದೀತೆಂದು ಆ ಹೊತ್ತೇ ನಮಗೆ ತೋರಿತ್ತು" ಎಂದು ಹೇಳಿತು.

28. Sayings of poor Richard.


೨೮. ಬಡ ರಿಚರ್ಡನ ಬೋಧನೆಗಳು.

ರೈತರ ಹತ್ತು ಪಾಲು ಕಾಲದಲ್ಲಿ ಒಂದು ಪಾಲು ಕಾಲ ಅವರು ತಮ್ಮ ಕೆಲಸ ಮಾಡ ಬೇಕೆಂದು ಸರಕಾರದವರು ಕಟ್ಟಳೆ ಮಾಡಿದರೆ, ರೈತರು ಅದನ್ನು ಕಷ್ಟವೆಂದೆಣಿಸುವರಲ್ಲವೇ? ಆದರೆ ಜನರು ಸೋಮಾರಿತನದಿಂದ ತಮ್ಮ ಕಾಲದ ಹತ್ತನೇ ಪಾಲು ಮಾತ್ರವಲ್ಲ, ಬಹಳ ಹೆಚ್ಚು ಕಾಲ ಸುಮ್ಮನೆ ಕಳಿಯುತ್ತಾರೆ. ಇದಲ್ಲದೆ ಸೋಮಾರಿತನದಿಂದ ರೋಗಗಳು ಹುಟ್ಟಿ, ಆಯುಷ್ಯವು ಕಡಿಮೆಯಾಗುತ್ತದೆ. ಸೋಮಾರಿತನವು ತುಕ್ಕಿನಂತೆ ಶರೀರದ ಬಲವನ್ನು ಸುಟ್ಟು ಬಿಡುತ್ತದೆ. ನಮಗೆ ಆಯುಷ್ಯ ಬಹಳ ಬೇಕಾಗಿದ್ದರೆ, ಸುಮ್ಮನೆ ಹೊತ್ತು ಕಳಿಯ ಬಾರದು. ಹೊತ್ತು ಎಲ್ಲಾ ವಸ್ತುಗಳಿಗಿಂತ ಬಹಳ ಬೆಲೆಯುಳ್ಳದ್ದು. ಅದನ್ನು ವ್ಯರ್ಥವಾಗಿ ಕಳಿಯುವದು ದೊಡ್ಡ ನಷ್ಟ. ಕಳ ಕೊಂಡ ಹಣವು ತಿರಿಗಿ ಬಂದೀತು, ಆದರೆ ಕಳಿದ ಹೊತ್ತು ಎಂದಿಗೂ ತಿರಿಗಿ ಬರುವದಿಲ್ಲ. ಅದರ ದೆಸೆಯಿಂದ ಜನರು ಮನಸ್ಸಿಟ್ಟು, ತಮ್ಮ ತಮ್ಮ ಕಾರ್ಯಗಳನ್ನು ತಡ ಮಾಡದೆ ಮಾಡ ಬೇಕು. ಸೋಮಾರಿಗಳಿಗೆ ಎಲ್ಲಾ ಕೆಲಸಗಳು ಕಠಿಣವಾಗಿ ತೋರುತ್ತವೆ. ಆದರೆ ಉದ್ಯೋಗ ಮಾಡುವವನಿಗೆ ಒಂದಾದರೂ ಕಠಿಣವಾಗಿ ತೋರುವದಿಲ್ಲ. ಸೋಮಾರಿಗಳಿಗೆ ಸರ್ವ ಕಾಲದಲ್ಲಿ ದರಿದ್ರತ್ವವೇ. ಹಾಸಿಗೆಯೊಳಗಿಂದ ಹೊತ್ತು ಮಾಡಿ ಏಳ ಬಾರದು; ತೀವ್ರ ಎದ್ದರೆ ಎಲ್ಲಾ ಕೆಲಸಗಳಾಗುತ್ತವೆ. ಬೇಗ ಮಲಗಿ ಬೇಗ ಎದ್ದರೆ, ಆರೋಗ್ಯವೂ ಐಶ್ವರ್ಯವೂ ಜ್ಞಾನವೂ ಉಂಟಾಗುತ್ತವೆ. ದುಡಿಯುವವನ ಆಶೆಗಳೆಲ್ಲ ಪೂರ್ಣ ಆಗುತ್ತವೆ; ಆದರೆ ದುಡಿಯದೆ ಆಶಿಸುವವನು ಉಪವಾಸ ಬೀಳುತ್ತಾನೆ. ದರಿದ್ರತ್ವವು ದುಡಿಯುವವನ ಮನೆಯ ಕಡಿಗೆ ಹಣಿಕಿ ನೋಡಿ ಒಳಗೆ ಶೇರಲಾರದು. ಬಹಳ ಕೆಲಸ ಇದ್ದು, ಅದನ್ನು ಮಾಡುವದಕ್ಕೆ ತ್ರಾಣವಿಲ್ಲದಿದ್ದರೆ, ಕೈಯಿಂದಾದಷ್ಟು ಮಾಡ ಬೇಕು. ಯಾತಕ್ಕೆಂದರೆ ನೀರಿನ ಹನಿಗಳು ಒಂ

ದೊಂದೇ ಬಿದ್ದು, ಕೆಲವು ಕಾಲದಲ್ಲಿ ಕಲ್ಲಿನ ಬಂಡೆ ಕೊರೆಯುತ್ತವೆ; ಕೊಡ್ಲಿಯ ಸಣ್ಣ ಪೆಟ್ಟುಗಳಿಂದ ದೊಡ್ಡ ಮರಗಳು ಬೀಳುತ್ತವೆ.

29. Industry (The Bee).

೨೯. ಉದ್ಯೋಗ (ಜೇನುನೊಣ).



ಭಾಮಿನಿ.


ಒಂದು ಕ್ಷಣ ಸಹ ವ್ಯರ್ಥ ಕಳೆಯದೆ,
ಅಂದದಿಂದರಳಿರುವ ಪುಷ್ಪಗ—
ಳಿಂದ ಜೇನ್ನೊಣ ಹಗಲಿನಲಿ ಜೇನನ್ನು ಕೂಡ್ಹಾಕಿ, ||
ಮುಂದೆ ಗೂಡನು ಕಟ್ಟಿ, ಚತುರತೆ—
ಯಿಂದ ಮೇಣವ ಹರವುತದರೊಳು,
ಚಂದದಿಂದುದ್ಯೋಗ ಮಾಡುವದ್ಹ್ಯಾಗೆ, ಮಿತ್ರಗಳೇ? || ೧ ||
ಗುಣಮಣಿಗಳೇ ಕೇಳಿರೀ ಜೇನ್
ನೊಣದ ಹಾಗುದ್ಯೋಗವನ್ನನು—
ದಿನದಿ ಅಲಸವ ತೊರೆದು ಮಾಡಲು, ಜನರು ಲಾಭವನು ||
ಕೊನೆಗೆ ಹೊಂದುವರಲ್ಲದಿರೆ ಸುಂ—
ಮನೆ ಕುಳಿತರತಿ ದುಷ್ಟ ಕಲ್ಪನೆ
ಮನಸಿನೊಳು ಬಂದವರಿಗದು ನಿಶ್ಚಯದಿ ಕೆಡಿಸುವದು. || ೨ ||

30. Letter from a Schoolboy to his Master.

೩೦. ಹುಡುಗನು ಅಯ್ಯನವರಿಗೆ ಬರೆದ ಪತ್ರ.


ಬಹು ಘನವುಳ್ಳ ಅಯ್ಯನವರಾದ ಜಗನ್ನಾಥ ಪಂಡಿತರಿಗೆ.—ಶಿರಸಾಷ್ಟಾಂಗವೆರಗಿ ಮಾಡಿ ಕೊಂಡ ಬಿನ್ನಹ. ನಾನು ತಮ್ಮ ಅಪ್ಪಣೆ ತೆಗದು ಕೊಂಡು ಸೋಮವಾರ ದಿವಸ ಹೊರಟು, ಇಲ್ಲಿಗೆ ಸುರಕ್ಷಿತವಾಗಿ ಗುರುವಾರ ದಿವಸ ಬಂದು ಮುಟ್ಟಿದೆನು. ಮನೆಯಲ್ಲಿ ಹಿರಿಯರೂ, ಅಣ್ಣತಮ್ಮಂದಿರೂ, ಅಕ್ಕ ತಂಗಿಯಂದಿರೂ ಕ್ಷೇಮದಿಂದ ಇದ್ಧಾರೆ. ಹಿರಿಯರು ನಿನ್ನೆ ನನ್ನ ಪರೀಕ್ಷೆ ತೆಗೆದು ಕೊಂಡು, ಅಚ್ಚು ಹಾಕಿದ ಪುಸ್ತಕ ನೆಟ್ಟಗೆ ಓದಲಿಕ್ಕೆ ಬರುತ್ತದೆಂದು ಅಂದರು. ನಾನು ನನ್ನ ಪಾಠದ ಪುಸ್ತಕದೊಳಗೆ ಕಲಿತ ಕವಿತ್ವಗಳನ್ನು ಅವರ ಮುಂದೆ ಅಂದು ತೋರಿಸಿದೆನು. ಅವರು ಅವನ್ನು ಕೇಳಿ, ಬಹಳ ಸಂತೋಷ ಪಟ್ಟರು. ನನ್ನ ಪ್ರಿಯ ಅಣ್ಣಂದಿರಾದ ಗೋವಿಂದರಾಯರು ಈ ಊರಲ್ಲಿ ಇಲ್ಲ, ಪರ ಊರಿಗೆ ಹೋಗಿದ್ಧಾರೆ. ಅವರು ತಿರುಗಿ ಎಂಟು ದಿವಸದಲ್ಲಿ ಬರುವರು. ಅಲ್ಲಿ ತನಕ ನಾನು ಇಲ್ಲಿ ಇದ್ದು, ಅವರ ದರ್ಶನ ತೆಗದು ಕೊಂಡು ಹೋಗ ಬೇಕೆಂದು ಹಿರಿಯರ ಅಪೇಕ್ಷೆ ಇರುವದರಿಂದ, ತಮಗೆ ಈ ಪತ್ರದ್ವಾರದಿಂದ ಬೇಡಿ ಕೊಳ್ಳುವದೇನಂದರೆ, ನನಗೆ ದಯ ಮಾಡಿ ಹೆಚ್ಚಿಗೆ ಎಂಟು ದಿವಸದ ಅಪ್ಪಣೆ ಕೊಡ ಬೇಕು; ನಾನು ಕೈಲಾದ ಮಟ್ಟಿಗೆ ಬೇಗ ಹೊರಟು ಬರುತ್ತೇನೆ. ತಮ್ಮ ಅಪ್ಪಣೆಯ ಪ್ರಕಾರ ಕಲಿತ ಪಾಠಗಳನ್ನು ಮರಿಯದಂತೆ ತಿರಿತಿರಿಗಿ ಓದುತ್ತ ಬರುತ್ತೇನೆ. ಇತಿ ಶಿರಸಾಷ್ಟಾಂಗ ನಮಸ್ಕಾರ.

ತಮ್ಮ ಆಜ್ಞಾಂಕಿತ ಶಿಷ್ಯನಾದ ರಂಗ.



31. The Leopard.

೩೧. ಚಿರ್ಚು.



ಚಿರ್ಚು ಹಿಂದುಸ್ಥಾನ ದೇಶದಲ್ಲಿಯೂ ಅಫ್ರಿಕ ಖಂಡದೊಳಗಿನ ಕೆಲವು ದೇಶಗಳಲ್ಲಿಯೂ ದೊರಿಯುತ್ತದೆ. ಅದರ ತೊಗಲು ಹಳದಿ ಬಣ್ಣದ್ದಾಗಿದ್ದು, ಚಿಕ್ಕಿಚಿಕ್ಕಿಯುಳ್ಳದ್ದಾಗಿದೆ. ಬೆಕ್ಕೂ ಚಿರ್ಚೂ ಹುಲಿಯೂ ಇವೆಲ್ಲವುಗಳು ಒಂದೇ ಜಾತಿಯ ಪಶುಗಳು. ಚಿರ್ಚು ತನ್ನ ದವಡಿಯಿಂದ ಬೇಕಾದ ಪಶುವನ್ನು ಹಿಡಿದು, ಹಿಚಕಿ, ಕೊಂದು ಬಿಡುವದು. ಅದು ಹಗಲೆಲ್ಲ ತನ್ನ ಗವಿಯೊಳಗೆ ಮಲಗಿ ಕೊಂಡು, ಇರುಳೆಲ್ಲ ಬೇಟೆ ಸಂಪಾದಿಸುವದಕ್ಕೆ ಹೋಗುತ್ತದೆ. ಅದರ ಕೊರಳು ಘಟ್ಟಿಯಾಗಿಯೂ ದಪ್ಪಾಗಿಯೂ ಇರುವ ಪ್ರಯುಕ್ತ ತಿರಿಗಿ ನೋಡ ಬೇಕಾದರೆ, ಮಣಿಯುವದಿಲ್ಲ. ಅದು ಸ್ವಲ್ಪ ಕುಂಟು ನಡಿಗೆಯುಳ್ಳದ್ದು.

ಒಬ್ಬ ತುತೂರಿ ಊದುವವನು ರಾತ್ರಿಕಾಲದಲ್ಲಿ ಸಾರಾಯಿ ಕುಡಿದು, ಸ್ಮೃತಿದಪ್ಪಿ ಬಿದ್ದಿದ್ದನು. ಅಷ್ಟರಲ್ಲಿ ಅಲ್ಲಿ ಅಕಸ್ಮಿತವಾಗಿ ಒಂದು ಚಿರ್ಚು ಬಂದು, ಅವನನ್ನು ಎಳಿದು ಕೊಂಡು, ತನ್ನ ಗವಿಗೆ ತೆಗದು ಕೊಂಡು ಹೋಗಲಾರಂಭಿಸಿತು. ಆಗ್ಯೆ ಅವನಿಗೆ ಎಚ್ಚರ ಹುಟ್ಟಿ, ಅವನು ಕಣ್ಣು ತೆರೆದು ನೋಡಲಾಗಿ, ಚಿರ್ಚು ದೃಷ್ಟಿಗೆ ಬಿತ್ತು. ಅದನ್ನು ಕಂಡು

ಹೆದರಿ, ಅವನ ಅಮಲು ಇಳಿದು, ಜನರು ತೀವ್ರದಿಂದ ತನ್ನ ಸಹಾಯಕ್ಕೆ ಬರ ಬೇಕೆಂದು ತುತೂರಿಯನ್ನು ಘಟ್ಟಿಯಾಗಿ ಊದಿದನು. ಅದನ್ನು ಕೇಳಿ, ಚಿರ್ಚು ಅಂಜಿ, ಅವನನ್ನು ಬಿಟ್ಟು ಓಡಿ ಹೋಯಿತು.

32. The Nutmeg tree.

೩೨. ಜಾಜಿಕಾಯಿಯ ಗಿಡ.

ಆಸ್ಯ ಖಂಡದ ಪೂರ್ವಕ್ಕೆ ಮಲಕ್ಕಾ ಎಂಬುವ ಬೆಟ್ಟಗಳವೆ. ಅಲ್ಲಿ ಜಾಜಿಕಾಯಿಯ ಗಿಡಗಳಾಗುತ್ತವೆ. ಆ ಬೆಟ್ಟಗಳಲ್ಲಿ ಬಾಂಡಾ ಎಂಬ ಹೆಸರಿನ ಬೆಟ್ಟದಲ್ಲಿ ಬಹಳ ಆಗುತ್ತವೆ. ಅಲ್ಲಿಯಂತೆ ಎರಡನೇ ಸ್ಥಳದಲ್ಲಿ ಆಗುವದಿಲ್ಲ. ಈ ದೇಶದೊಳಗೆ ಕೆಲವು ಸ್ಥಳಗಳಲ್ಲಿ ಜಾಜಿಕಾಯಿಯ ಗಿಡದ ತೋಟಗಳುಂಟು. ಆದರೆ ಅಲ್ಲಿ ಬಹಳ ಕಾಯಿಗಳಾಗುವದಿಲ್ಲ. ಜಾಜಿಕಾಯಿಯ ಗಿಡವು ಬಹು ಮನೋಹರವಾದದ್ದು. ಅದರ ಕಾಯಿ ಅಡಕೆಯಷ್ಟು ಇರುತ್ತದೆ. ಜಾಜಿಕಾಯಿಯ ಗಿಡಕ್ಕೆ ಶ್ರಾವಣದಿಂದ ಭಾದ್ರಪದದ ವರಿಗೆ ಹಣ್ಣು ಆಗುತ್ತದೆ. ಜಾಜಿಕಾಯಿಯ ಬಣ್ಣ ಹಳದಿ. ಅದರ ಸುತ್ತಲಿರುವದೇ ಪತ್ರಿ. ಅದರ ಬಣ್ಣ ನಸುಗೆಂಪು ಇರುತ್ತದೆ. ತೆಂಗಿನ ಕಾಯಿಯಂತೆ ಜಾಜಿಕಾಯಿಯ ಮೇಲೆ ಕವಚವಿರುತ್ತದೆ. ಪಕ್ವವಾದ ಮೇಲೆ ಕಾಯಿಯನ್ನು ಉದರಿಸಿ ಕೊಂಡು, ಮೇಲಿನ ಕವಚವನ್ನು ತೆಗಿದು, ಒಳಗಿನ ಪತ್ರಿಯನ್ನು ಕೆತ್ತಿ ಕೊಂಡು, ಬಿಸಲೊಳಗೆ ಒಣಗಿಸಿ, ದೇಶದೇಶಕ್ಕೆ ಮಾರಾಟಕ್ಕೆ ಒಯ್ಯುತ್ತಾರೆ.

ಮಲಕ್ಕಾ ಬೆಟ್ಟಗಳು ಡಚ್ಚ ಜನರ ಆಳಿಕೆಯ ಕೆಳಗಿನವು. ಅಲ್ಲಿ ಅವರು ತೊತ್ತಿಗರ ಕೈಯಿಂದ ಜಾಜಿಕಾಯಿಯ ಗಿಡಗಳನ್ನು ಹಚ್ಚಿಸಿ ಬೆಳಿಸುತ್ತಾರೆ. ಅವರು ಪೂರ್ವದಲ್ಲಿ, ಜಾಜಿಕಾಯಿ ಬಹಳ ಬೆಳಿದ ವರ್ಷ, ಮಾರಾಟಕ್ಕೆ ಬೇಕಾದಷ್ಟು ಇಟ್ಟು ಕೊಂಡು, ಉಳಿದವುಗಳನ್ನು ಸುಟ್ಟು ಬಿಡುತ್ತಿದ್ದರೇ ಹೊರ್ತು, ಅಗ್ಗವಾಗಿ ಮಾರುತ್ತಿದ್ದಿಲ್ಲ. ಅದು ದುಷ್ಟ ಬುದ್ಧಿ. ಆ ಪ್ರಕಾರ ಮಾಡಿದ್ದು ಒಳ್ಳೇದಲ್ಲ.

33. Iron.

೩೩. ಕಬ್ಬಿಣ.

ಕಬ್ಬಿಣವು ನೀರಿಗಿಂತ ಹೆಚ್ಚು ಕಡಿಮೆ ಎಂಟು ಪಾಲು ಜಡವಾದದ್ದು.
ಅದರಷ್ಟು ಉಪಯುಕ್ತವಾದ ಧಾತುವೇ ಇಲ್ಲ. ಕಬ್ಬಿಣವು ಸಾಧಾರಣ
ವಾಗಿ ಎಲ್ಲ ದೇಶಗಳಲ್ಲಿ ದೊರಿಯುತ್ತದೆ. ಜ್ಞಾನಿಗಳು ಎಲೆ, ಹೂವು,
ಹಣ್ಣು, ಕಾಯಿ, ನೀರು, ಹಾಲು, ಮನುಷ್ಯನ ರಕ್ತ ಮೊದಲಾದ ಎಲ್ಲ
ಪದಾರ್ಥಗಳಲ್ಲಿ ಅದರ ಅಂಶವದೆಂದು ಅನ್ನುತ್ತಾರೆ. ಅದರ ಸಮಾನ
ಬಲವಾದ ಧಾತುವೇ ಇಲ್ಲ. ಅದರಿಂದಲೇ ಪಂಚಾಲರ ಸಾಮಾನುಗ
ಳೂ, ಲಡಾಯಿಯ ಆಯುಧಗಳೂ ಆಗುತ್ತವೆ. ಕಬ್ಬಿಣವಿರದಿದ್ದರೆ, ಮ
ನೆಗಳು ಕಟ್ಟಲ್ಪಡುತ್ತಿದ್ದಿಲ್ಲ, ಪಟ್ಣಗಳು ಸ್ಥಾಪಿಸಲ್ಪಡುತ್ತಿದ್ದಿಲ್ಲ, ಶಿಲ್ಪ ವಿದ್ಯೆ
ಗಳು ಹೆಚ್ಚುತ್ತಿದ್ದಿಲ್ಲ; ಸಾರಾಂಶವೇನಂದರೆ, ಈಗಿನ ಸ್ಥಿತಿಯು ಮನುಷ್ಯ
ನಿಗೆ ಪ್ರಾಪ್ತಿಯಾಗುತ್ತಿದ್ದಿಲ್ಲ. ವಿಲಾಯತಿಯಲ್ಲಿಯೂ ಫ್ರಾನ್ಸ್ ದೇಶ
ದಲ್ಲಿಯೂ ಕಬ್ಬಿಣಖಣಿಗಳು ಬಹಳ. ಕಬ್ಬಿಣವು ಖಣಿಯೊಳಗಿಂದ
ಅಗಿದು ತೆಗಿದಾಗ್ಯೆ, ಕಲ್ಲು ಮಣ್ಣು ಮೊದಲಾದ ಪದಾರ್ಥಗಳಲ್ಲಿ ಕೂಡಿ
ಕೊಂಡಿರುವದರಿಂದ, ಅದನ್ನು ತೊಳಿದು, ಯಂತ್ರದಿಂದ ಪುಡಿ ಮಾಡಿ, ಕು
ಲಿಮೆಯಲ್ಲಿ ಹಾಕುತ್ತಾರೆ. ಅದರಿಂದ ಅದಕ್ಕೆ ಕೂಡಿ ಕೊಂಡಿದ್ದ ಗಂಧಕ
ಮೊದಲಾದ ಪದಾರ್ಥಗಳು ಸುಟ್ಟು ಹೋಗುತ್ತವೆ. ಆ ಮೇಲೆ ಅದ
ರೊಳಗೆ ಸ್ವಲ್ಪ ಇದ್ದಲಿಯನ್ನೂ ಸುಣ್ಣವನ್ನೂ ಕೂಡಿಸಿ, ಕರಗುವದಕ್ಕಾಗಿ
ಭಟ್ಟಿಯೊಳಗೆ ಹಾಕುತ್ತಾರೆ. ಅದರಿಂದ ಹಗುರಾದ ಸುಣ್ಣವೂ ಇದ್ದಲಿ
ಯೂ ಮೇಲೆ ನಿಂತು, ಭಾರವಾದ ಕಬ್ಬಿಣವು ಮಾತ್ರ ರಸವಾಗಿ ತಳಕ್ಕೆ
ಇಳಿಯುತ್ತದೆ. ತರುವಾಯ ಆ ಕುಲಿಮೆಯ ಕೆಳಗಿರುವ ದ್ವಾರವನ್ನು
ತೆಗೆದು ಬಿಟ್ಟರೆ, ಕಬ್ಬಿಣದ ರಸವು ಹೊರಗೆ ಬಂದು ಘಟ್ಟಿಯಾಗುತ್ತದೆ.
ಕಬ್ಬಿಣದ ಪಟ್ಟಿಗಳನ್ನು ತೆಗಿದು ಕೊಂಡು, ಇದ್ದಲಿಯ ಪುಡಿಯಲ್ಲಿ ಕೂ
ಡಿಸಿ, ಮಣ್ಣಿನ ಕೊಳಿವೆಗಳೊಳಗೆ ಹಾಕಿ, ಘಾಳಿಯ ಪ್ರವೇಶವಾಗಗೊ
ಡದಂತೆ ಬಾಯಿಗೆ ಕೆಮ್ಮಣ್ಣು ಹಚ್ಚಿ, ಬೆಂಕಿಯೊಳಗೆ ಹಾಕಿ ಕರಗಿಸಿದ

ರೆ, ಉಕ್ಕು ಆಗುತ್ತದೆ. ಉಕ್ಕಿನಿಂದ ಸೂಜಿ ಕತ್ತಿ ಮೊದಲಾದವುಗಳು ಆಗುತ್ತವೆ.

34. Devasharma Pandita.

೩೪. ದೇವಶರ್ಮನೆಂಬ ಪಂಡಿತನು.


ಒಂದು ಸಮಯದಲ್ಲಿ ದೇವಶರ್ಮನೆಂಬ ಪಂಡಿತನು ಆಡುತ್ತಿರಲಾಗಿ, ಅದನ್ನು ಕಂಡು ಮತ್ತೊಬ್ಬ ಪಂಡಿತನು ಅವನ ಹಾಸ್ಯ ಮಾಡಲು, ಆ ದೇವಶರ್ಮನು ಅವನ ಗರ್ವ ಭಂಗ ಮಾಡ ಬೇಕೆಂದು, ಒಂದು ಬಿಲ್ಲನ್ನು ತರಿಸಿ, ಅದರ ಹೆದೆಯನ್ನು ಇಳಿಸಿ, ಭೂಮಿಯ ಮೇಲಿಟ್ಟು, "ಇದರ ಭಾವವೇನು ಹೇಳಿದರೆ, ನೀನು ಪಂಡಿತನೇ ಸರಿ" ಎಂದು ಹೇಳಲಾಗಿ, ಆ ಪಂಡಿತನಿಗೆ ಅದರ ಭಾವವು ತಿಳಿಯಲಿಲ್ಲವಾದ ಕಾರಣ, "ಅದರ ಅರ್ಥವು ನನಗೆ ತಿಳಿಯಲಿಲ್ಲ, ನೀನೇ ಹೇಳು" ಎಂದು ದೇವಶರ್ಮನನ್ನು ಕೇಳಲಾಗಿ, "ನಿನಗೆ ತಿಳಿಯದಿದ್ದರೆ, ನಾನು ಹೇಳುತ್ತೇನೆ ಕೇಳು. ಈ ಬಿಲ್ಲು ಯಾವಾಗಲೂ ಬಾಗಿ ಕೊಂಡಿದ್ದರೆ, ಶೀಘ್ರವಾಗಿ ಮುರಿದು ಹೋದೀತು, ಹಾಗಲ್ಲದೆ ಕೆಲಸ ಬಿದ್ದ ಕಾಲಕ್ಕೆ ಮಾತ್ರ ಬೊಗ್ಗಿಸುತ್ತಿದ್ದರೆ, ಬಹಳ ದಿವಸಗಳ ಮಟ್ಟಿಗೆ ತಾಳೀತು. ಹಾಗೆಯೇ ಈ ಬಿಲ್ಲಿನಂತಿರುವ ಮನುಷ್ಯನ ಮನಸ್ಸು ಯಾವಾಗಲೂ ಕೆಲಸದಲ್ಲಿದ್ದರೆ, ತೀವ್ರವಾಗಿ ಬಲಹೀನವಾಗಿ ಹೋಗುವದು. ಇದು ನನ್ನ ಆಟದ ಹದವು" ಎಂದು ಹೇಳಲಾಗಿ, ಆ ಪಂಡಿತನು ನಿಜವೆಂದು ಒಪ್ಪಿ ಕೊಂಡು, ದೇವಶರ್ಮನನ್ನು ಹರಿಸುತ್ತ ಹೋದನು.

35. The lost Camel.

೩೫. ತಪ್ಪಿಸಿ ಕೊಂಡ ಒಂಟೆ.

ಒಂದಾನೊಂದು ದಿವಸ ಒಬ್ಬ ಬೈರಾಗಿಯು ಪ್ರವಾಸ ಮಾಡುತ್ತಿರಲಾಗಿ, ಆತನಿಗೆ ಹಾದಿಯೊಳಗೆ ಇಬ್ಬರು ವರ್ತಕರ ಗಂಟು ಬಿತ್ತು. ಅ

ವರ ಮುಖ ನೋಡಿ, ಅವನು ನೀವು ಒಂಟಿ ಕಳಿದು ಕೊಂಡವರಲ್ಲವೇ? ಎಂದು ಕೇಳಿದನು. ಅವರು ಹೌದು ಅಂದರು. ಹಾಗಾದರೆ ಅದರ ಬಲಗಣ್ಣು ಕುರುಡು, ಎಡಗಾಲು ಕುಂಟ ಇತ್ತಲ್ಲವೋ? ಎಂದು ಕೇಳಿದನು. ಅದಕ್ಕವರು ಹೌದು ಅಂದರು. ಅದರದೊಂದು ಹಲ್ಲು ಬಿದ್ದಿತ್ತೇನೆಂದು ಬೈರಾಗಿಯು ಕೇಳಿದನು. ಅದಕ್ಕವರು ಹೌದು ಅಂದರು. ಒಳ್ಳೇದು, ಅದರ ಮೇಲೆ ಒಂದು ಕಡಿಗೆ ಜೇನು, ಒಂದು ಕಡಿಗೆ ಕಾಳು ಹೇರಿತ್ತಲ್ಲವೇ? ಎಂದು ಕೇಳಿದನು. ಅದಕ್ಕವರು ಹೌದು, ಅದನ್ನು ನೀವೆಲ್ಲಿ ನೋಡಿದಿರಿ? ತಪ್ಪಿಸಿ ಕೊಂಡದೆ, ನಮಗೆ ಸಿಗವಲ್ಲದೆಂದು ಅಂದರು. ಅದಕ್ಕಾ ಬೈರಾಗಿಯು ನಿಮ್ಮ ಒಂಟೆಯನ್ನು ನಾನು ಹುಟ್ಟಾ ನೋಡಲಿಲ್ಲ ಎಂದು ಹೇಳಿದನು. ಅದನ್ನು ಕೇಳಿ, ವರ್ತಕರು ವಿಸ್ಮಯ ಪಟ್ಟು, ಹಾಗಾದರೆ ಇಷ್ಟೆಲ್ಲ ನಿಮಗೆ ಹ್ಯಾಗೆ ತಿಳಿಯಿತು? ಎಂದು ಕೇಳಿದರು. ಬೈರಾಗಿಯು ಪ್ರತ್ಯುತ್ತರವಾಗಿ ಹೇಳಿದ್ದೇನಂದರೆ: ಒಂಟೆಯು ಹೆಜ್ಜೆ ಇಟ್ಟಲ್ಲಿ ಮನುಷ್ಯನ ಹೆಜ್ಜೆ ಇದ್ದಿಲ್ಲ, ಅದರ ಮೇಲಿಂದ ನಿಮ್ಮ ಒಂಟೆಯು ತಪ್ಪಿಸಿ ಕೊಂಡು ಹೋದದ್ದೆಂದು ತಿಳಿದೆನು. ಒಂಟೆಯು ಒಂದು ಕಡೆಯ ತೊಪ್ಪಲ ಮಾತ್ರ ಹರಿದು ಕೊಂಡು ತಿಂದಿದ್ದರ ಮೇಲಿಂದ ಒಂಟಿಗಣ್ಣಿಂದೆಂದು ತಿಳಿದೆನು. ಎಡಗಡೇ ಹೆಜ್ಜೆ ಭೂಮಿಯ ಮೇಲೆ ನೆಟ್ಟಗೆ ಮೂಡುತ್ತಿದ್ದಿಲ್ಲವಾದ ಕಾರಣ ಎಡಗಾಲು ಕುಂಟು ಎಂದು ತಿಳಿದೆನು. ಅದು ತೊಪ್ಪಲ ಹರಿದು ಕೊಂಡಲ್ಲೆಲ್ಲ ನಡುವೆ ಸ್ವಲ್ಪ ಚೂರು ಉಳಿದಿತ್ತಾದ ಕಾರಣ ಅದರ ಹಲ್ಲು ಬಿದ್ದಿತ್ತೆಂದು ತಿಳಿದೆನು. ಮತ್ತು ಮಾರ್ಗದಲ್ಲಿ ಬಲಗಡಿಗೆ ನೊಣಗಳು, ಎಡಗಡಿಗೆ ಇರುವೆಗಳು ಮುತ್ತಿದ್ದವಾದ ಕಾರಣ, ಬಲಗಡಿಗೆ ಜೇನೂ ಎಡಗಡಿಗೆ ಕಾಳೂ ಹೇರಿತ್ತೆಂದು ತಿಳಿದೆನು. ಈ ಮಾತು ಕೇಳಿ, ವರ್ತಕರು ಬಹಳ ಆಶ್ಚರ್ಯ ಪಟ್ಟರು.



36. A Riddle (book).

"I'm a strange contradiction, I'm new and I'm old".

೩೬. ಬೆಡಗು (ಪುಸ್ತಕ).

ಭಾಮಿನಿ.

ನಾನು ಬಲು ವಿಪರೀತ ಪುಂಜನು,
ನಾನು ಹೊಸಬನು, ನಾನು ಹಳೆಯನು,
ನಾನು ರಗಟ್ಯೆಡುವವನು, ಮತ್‌ಜರದರವಿ ಧರಿಸವನು; ||
ನಾನು ಅಕ್ಷರ ಓದದಿದ್ದರು
ನಾನು ಸಾಕ್ಷರನಾಗಿ ಇರುವೆನು;
ನಾನು ಯಾರದು ತಿಳಿದು ಪೇಳುವದೆನ್ನ ಸ್ನೇಹಿತರೇ. || ೧ ||

ನಾನು ಕುರುಡನು ಸ್ವಂತನಾದರು
ನಾನು ಕಣ್ದೆರಿಸುವೆನು ಮನುಜರ,
ನಾನು ಬಿಚ್ಚಾಗಿದ್ದರೂ ಬಲು ಬಂಧನಾದವನು ||
ನಾನು ಕರಿಯನು, ನಾನು ಬಿಳಿಯನು,
ನಾನು ನಾನಾ ಬಣ್ಣವುಳ್ಳವ;
ನಾನು ಯಾರದು ತಿಳಿದು ಪೇಳುವದೆನ್ನ ಮಿತ್ರಗಳೇ. || ೨ ||

ನಾನು ಭಾರನು ನಾನು ಹಗುರನು,
ನಾನು ದಪ್ಪನು, ನಾನು ತಿಳುಪನು,
ನಾನು ಬಹು ಗಂಭೀರ, ಮತ್ತತಿ ಹಾಸ್ಯಗಾರನು ನಾ, ||
ನಾನು ಮಾಂಸೆಲ ರಹಿತನಾದರು
ನಾನು ಪರಿಪರಿ ದೊಗಲ ಉಡಿಯನು;
ನಾನು ಯಾರದು ತಿಳಿದು ಪೇಳುವದೆನ್ನ ಬಂಧುಗಳೇ. || ೩ ||

ನಾನು ಜನ್ಮದ ಮೂಕನಾದರು
ನಾನು ಪರರನು ಖಂಡಿಸುವೆನತಿ,
ನಾನು ಕರ್ನಾಟಾಂಗ್ಲ ಮೊದಲಾದಖಿಳ ದೇಶದವ; ||

ನಾನು ಬಲು ಬಲು ಬೇಗ ಸಾಯುವ,
ನಾನು ದೀರ್ಘಾಯುಷ್ಯವುಳ್ಳವ;
ನಾನು ಯಾರದು ತಿಳಿದು ಪೇಳುವದೆನ್ನ ಬಾಂಧವರೇ. || ೪ ||

ಪುಸ್ತಕ

37. Letter from a Schoolboy to his elder Brother.


೩೭. ಹುಡುಗನು ಅಣ್ಣನಿಗೆ ಬರೆದ ಪತ್ರ.

ಪ್ರಿಯ ಅಣ್ಣಂದಿರಾದ ಗೋವಿಂದರಾಯರಿಗೆ.—ರಂಗನು ಮಾಡುವ ಶಿರಸಾಷ್ಟಾಂಗ ನಮಸ್ಕಾರವು. ಅದಾಗಿ ಈಗ ವೈಶಾಖ ಶುದ್ಧ ೧೨ ವರಿಗೆ ಕ್ಷೇಮದಿಂದ ಇದ್ದೇನೆ. ತರುವಾಯ ತಾವು ಕಳುಹಿಸಿದ ಪತ್ರ ಬಂದು ಮುಟ್ಟಿತು. ಮನೆಯಲ್ಲಿ ಪ್ರಿಯ ತಂಗಿಯಾದ ಭಾಗೀರಥಿಯು ಧೂಳಾಕ್ಷರಗಳನ್ನು ಕಲಿಯುತ್ತಾಳೆಂದು ಓದಿ, ಬಹು ಆನಂದವಾಯಿತು. ನಾನು ಮೊದಲನೇ ಪುಸ್ತಕವನ್ನೆಲ್ಲ ಕಲಿತು, ಈಗ ಎರಡನೇ ಪುಸ್ತಕ ಹಿಡಿದು ಇದ್ದೇನೆ. ಮೊದಲನೇ ಪುಸ್ತಕದಲ್ಲಿ ಅನೇಕ ಮೃಗಗಳ ವರ್ಣನೆಗಳೂ ಒಳ್ಳೇ ಹುಡುಗರ ಚರಿತ್ರಗಳೂ ಕಲ್ಪನೇ ಕಥೆಗಳೂ ಉಪದೇಶದ ಮಾತುಗಳೂ ಕವಿತ್ವದ ಪಾಠಗಳೂ ಉಂಟು. ಅವನ್ನೆಲ್ಲ ಓದಿ ನನಗೆ ಬಹಳ ಆನಂದವಾಯಿತು. ಅದರೊಳಗಿನ ಕವಿತ್ವಗಳೆಲ್ಲ ಈಗ ನನಗೆ ಮುಖಪಾಠವಾಗಿವೆ. ಅವುಗಳ ಅರ್ಥವನ್ನು ಅಯ್ಯನವರು ನನಗೆ ತಿಳಿಸಿಕೊಟ್ಟಿದ್ದಾರೆ. ಈಗ ನಾನು ಕಲಿಯುವ ಎರಡನೇ ಪುಸ್ತಕವು ಸ್ವಲ್ಪ ಗಡಚಾಗಿದ್ದರೂ, ಬಹು ಚನ್ನಾಗಿದೆ. ಅದರೊಳಗೆ ಮೊದಲನೇ ಪುಸ್ತಕದಂತೆ ಮೃಗವರ್ಣನಾದಿಗಳು ಇರುವದಲ್ಲದೆ, ವೃಕ್ಷ ಲೋಹಾದಿಗಳ ವರ್ಣನೆಗಳೂ ಪತ್ರಗಳೂ ಇದ್ದಾವೆ. ಈ ಪುಸ್ತಕವು ತೀರುತ್ತಲೇ ಮೂರನೇ ಪುಸ್ತಕ ಕಲಿಸುತ್ತೇವೆಂದು ಅಯ್ಯನವರು ಹೇಳಿದ್ದಾರೆ. ತಾವು ನನಗೆ ಬರುವಾಗ್ಯೆ ತೀವ್ರವೇ ಒಂದು ಕಥೆಯ ಪುಸ್ತಕವನ್ನು ಕಳುಹಿಸುತ್ತೇವೆಂದು ಹೇಳಿದಂತೆ ಕಳುಹಿಸಿ ಕೊಡ ಬೇಕು. ಅದು ನನಗೆ ತಿಳಿಯದೆ

ಹೋದರೆ, ಅಯ್ಯನವರಿಗೆ ಕೇಳುತ್ತೇನೆ. ಅವರು ಬಹಳ ಒಳ್ಳೆವರಿದ್ದಾರೆ; ಎಷ್ಟು ಕೇಳಿದರೂ ಬೇಸರಿಯುವದಿಲ್ಲ. ನನಗಾದರೂ ಬಹಳ ಪ್ರೀತಿ ಮಾಡುತ್ತಾರೆ. ನಾನು ನನ್ನ ವರ್ಗದಲ್ಲಿ ಮೊದಲನೇಯವನಾಗಿ ಇದ್ದೇನೆ, ತಿಳಿಯುವದು. ಮನೆಯಲ್ಲಿ ತಂದೆ ತಾಯಿಯಂದಿರೂ ಅಣ್ಣ ತಮ್ಮಂದಿರೂ ಅಕ್ಕ ತಂಗಿಯಂದಿರೂ ಸುಖರೂಪದಲ್ಲಿದ್ದ ವರ್ತಮಾನ ಮೇಲೆ ಮೇಲೆ ಬರಿದು ಕಳುಹಿಸುತ್ತಿರ ಬೇಕು. ಇತಿ ಶಿರಸಾಷ್ಟಾಂಗ ನಮಸ್ಕಾರವು.

38. The Tiger.

೩೮. ಹುಲಿ.



ಭೂಮಿಯ ಮೇಲಿನ ಸಮಸ್ತ ಪಶುಗಳೊಳಗೆ ಹುಲಿಯು ಬಹು ಕ್ರೂರ ಸ್ವಭಾವವುಳ್ಳದ್ದು. ಮನುಷ್ಯನಾಗಲಿ ಪಶುವೇ ಆಗಲಿ ದೃಷ್ಟಿಗೆ

ಬಿದ್ದರೆ, ನಿಶ್ಚಯವಾಗಿ ಕೊಂದು ಹಾಕುವದು. ಅದು ಗಿಡದ ಕೆಳಗೆ ಜಪ್ಪಿಸಿ ಕೊಂಡು ಕುಳಿತು, ಒಮ್ಮಿಂದೊಮ್ಮೆ ಹಾರಿ, ಹಿಚಕಿ ಕೊಂದು ಬಿಡುತ್ತದೆ. ಕುದುರೆಯನ್ನೂ ಎತ್ತನ್ನೂ ಕೊಂದು, ಬಾಯೊಳಗೆ ಹಿಡಿದು ಕೊಂಡು, ಆಯಾಸವಿಲ್ಲದೆ ಹೋಗುತ್ತದೆ. ಪ್ರಸಂಗ ಬಿದ್ದರೆ, ಸಿಂಹನ ಸಂಗಡ ಸಹ ಯುದ್ಧ ಮಾಡುವದು.

ಒಂದು ದಿವಸ ಒಬ್ಬ ಒಕ್ಕಲಿಗನ ಎಮ್ಮೆಯು ಕೆಸರಿನಲ್ಲಿ ಸಿಕ್ಕಿ ಕೊಂಡಿತ್ತು. ಅದನ್ನು ಕಿತ್ತಿ ತೆಗೆಯ ಬೇಕೆಂದು ನಾಲ್ಕೈದು ಜನರು ಕೂಡಿ ಪ್ರಯಾಸ ಪಟ್ಟಾಗ್ಯೂ ಹೊರಡಲಿಲ್ಲ. ಆದ ಕಾರಣ ಹೆಚ್ಚಿಗೆ ಜನರನ್ನು ಕರಿದು ಕೊಂಡು ಬರ ಬೇಕೆಂದು ಎಲ್ಲರು ಊರ ಕಡಿಗೆ ಹೊರಟು ಹೋದರು. ಆದರೆ ಅವರು ತಿರಿಗಿ ಬರುವಷ್ಟರಲ್ಲಿ ಒಂದು ಹುಲಿಯು ಬಂದು, ಆ ಎಮ್ಮೆಯ ಕೊರಳಿನ ರಕ್ತ ಪಾನ ಮಾಡಿ, ಅದನ್ನು ಎತ್ತಿ ಕೊಂಡು ಹೋಗುತ್ತಿದ್ದದ್ದನ್ನು ಕಂಡರು.

ಬಂಗಾಳ ದೇಶದಲ್ಲಿ ಒಬ್ಬ ಧೊರೆಯು ತನ್ನ ಹೆಂಡತಿಯ ಸಂಗಡ ಸಾಯಂಕಾಲದಲ್ಲಿ ತಿರಿಗಾಡಲಿಕ್ಕೆ ಹೋಗಿ, ಒಂದು ಗಿಡದ ಬುಡಕ್ಕೆ ಕುಳಿತಿರಲಾಗಿ, ಒಂದು ಹುಲಿಯು ಮೇಘ ಗರ್ಜನೆಯಂತೆ ಡುರಕಿ ಹಾಕುತ್ತ ಬರಲು, ಆ ಧೊರೆಸಾನಿಯು ತನ್ನ ಕೊಡೆಯನ್ನು ಒಮ್ಮಿಂದೊಮ್ಮೆ ತೆರಿದಳು. ಅದನ್ನು ಕಂಡು ಹುಲಿಯು ಭಯ ಪಟ್ಟು, ಅವರಿಗೇನು ಅಪಾಯ ಮಾಡದೆ ಓಡಿ ಹೋಯಿತು.

39. The Plantain tree.
೩೯. ಬಾಳೇ ಗಿಡ.

ಬಾಳೇ ಗಿಡವು ಆಸ್ಯ ಅಫ್ರಿಕ ಅಮೇರಿಕ ಈ ಮೂರು ಖಂಡಗಳ ಉಷ್ಣ ಪ್ರದೇಶಗಳಲ್ಲಿ ಬೆಳಿಯುತ್ತದೆ. ಅದು ಆರು ಏಳು ಮೊಳಕ್ಕಿಂತ ಹೆಚ್ಚು ಬೆಳಿಯುತ್ತದೆ. ಅದಕ್ಕೆ ಇತರ ಗಿಡಗಳಂತೆ ಟೊಂಗಿಗಳು ಒಡಿಯದೆ, ತುದಿಯಲ್ಲಿ ಮಾತ್ರ ಎಲೆಗಳಿರುತ್ತವೆ. ಅವು ಘಾಳಿಯಲ್ಲಿ ರೆಕ್ಕೆ

ಗಳಂತೆ ತೇಲಾಡುತ್ತವೆ. ಬಾಳೆಯ ವನಗಳು ಬಹು ರಮಣೀಯವಾದ ವುಗಳು. ಶ್ರೀಮಂತರು ತಂಪಿಗಾಗಿ ಬಾಳೇ ವನದಲ್ಲಿ ಮನೆಗಳನ್ನು ಕಟ್ಟಿಸಿ ಇರುತ್ತಾರೆ. ಬಾಳೆಯ ಸಸಿ ಬೆಳೆದು, ಒಂದು ವರ್ಷದಲ್ಲಿ ಗೊನೆ ಗಟ್ಟುವಂತೆ ಆಗುತ್ತದೆ. ಆ ಗೊನೆಯು ಏಳು ಎಂಟು ತಿಂಗಳದೊಳಗೆ ಬೆಳೆದು ಹಣ್ಣಾಗುತ್ತದೆ. ಈ ಪ್ರಕಾರ ಬಾಳೇ ಗಿಡವು ಹೆಚ್ಚು ಕಡಿಮೆ ಒಂದುವರೆ ವರ್ಷದಲ್ಲಿ ಫಲ ಫಲಿಸುತ್ತದೆ. ಇಷ್ಟು ಬೇಗ ಫಲ ಫಲಿಸುವ ಗಿಡವು ಎರಡನೇದ್ಯಾವದೂ ಇಲ್ಲ. ಬಾಳೇ ಗಿಡದಲ್ಲಿ ವ್ಯರ್ಥವಾಗಿ ಹೋಗುವಂಥಾದ್ದು ಒಂದೂ ಇಲ್ಲ. ಅದರ ಕಾಯಿಯಿಂದಲೂ ದಿಂಡಿನಿಂದಲೂ ಪಲ್ಯ ಮಾಡುತ್ತಾರೆ. ಎಲೆಯಿಂದ ಪತ್ರಾವಳಿ, ದೊನ್ನೆಗಳಾಗುತ್ತವೆ. ಕೆಲವು ದೇಶಗಳಲ್ಲಿ ಅದರ ಎಲೆ ಒಣಗಿಸಿ, ಕಾಗದದಂತೆ ಬರಿಯುವದಕ್ಕೆ ಇಟ್ಟು ಕೊಳ್ಳುತ್ತಾರೆ. ಅದರ ನಾರು ಹಗ್ಗದಂತೆ ಕಟ್ಟುವದಕ್ಕೆ ಬರುತ್ತದೆ. ಬಾಳೇ ಗೊನೆಯೊಳಗೆ ನೂರು ಇನ್ನೂರು ಕಾಯಿಗಳಿರುತ್ತವೆ. ಆ ಗೊನೆಯು ಬಿಲ್ಲಿನಂತೆ ಬಾಗಿರುತ್ತದೆ. ಜಯಮಿನಿ ಭಾರತದ ೨ನೇ ಸಂಧಿಯ ೩೦ನೇ ಪದದಲ್ಲಿ ಭೀಮನು ವೃಷಕೇತುವಿಗೆ ಭದ್ರಾವತಿ ಪಟ್ಟಣವನ್ನು ತೋರಿಸಿ, ಅದರ ಸುತ್ತಲಿರುವ ವನಗಳ ವಿವರದಲ್ಲಿ ಬಾಳೇ ಗಿಡದ ವರ್ಣನೆಯನ್ನು ಮನೋಹರವಾಗಿ ಹೇಳುತ್ತಾನೆ. ಅದು ಹ್ಯಾಗಂದರೆ:—

"ಕುದ್ದಾಲ ಹತಿಯನುರೆ ತಾಳ್ದೆಮ್ಮ ನಿನ್ನೆಗಂ
ಮುದ್ದುಗೈದೀ ವಸುಧೆ ಬೆಳಯಿಸಿದಳೆಂದು ತುರು—
ಗಿದ್ದತನಿವಣ್ಗಳಿಂದೆಸೆವ ಪೇರ್ಗೊನೆಗಳಂ ಸಲೆ ಸಮರ್ಪಿಸಲೊಡರ್ಚೀ ||
ಎದ್ದಿರದೆ ಬಾಗಿದವೊ ಕದಳಿಗಳ್ ಧರಣಿಗೆನ—
ಲಿದ್ದಪರೆ ಮರಿದು ಪುರುಷಾರ್ಥಮಂ ಮಾಡಿದರ
ನುದ್ಧಾಮ ಗುಣವುಳ್ಳ ಜೀವಿಗಳ್ ತನುಜ ನೋಡೆಂದನಾ ಪವನಸೂ
[ನೂ". || ೩೦ ||

ಈ ಪದದ ಅಭಿಪ್ರಾಯವು ಹೊಸಗನ್ನಡದಲ್ಲಿ ಏನಂದರೆ:—ಗುದ್ದಲಿಯ ಪೆಟ್ಟನ್ನು ಚನ್ನಾಗಿ ತಾಳಿ, ನಮ್ಮನ್ನು ಈ ವರೆಗೆ ಮುದ್ದಿಟ್ಟು, ಈ

ಭೂಮಿ ಸಾಕಿದಳೆಂದು, ತುಂಬಿದ ಒಳ್ಳೇ ಹಣ್ಣುಗಳಿಂದ ಮೆರೆಯುವ ದೊಡ್ಡ ಗೊನೆಗಳನ್ನು ಚನ್ನಾಗಿ ಒಪ್ಪಿಸುವದಕ್ಕಾಗಿ, ಎದ್ದು ನಿಲ್ಲದೆ, ಬಾಳೆಗಳು ಭೂಮಿಗೆ ಬೊಗ್ಗಿ ಕೊಳ್ಳುತ್ತವೋ ಏನೋ ಎಂಬುವಂತೆ ಉಪಕಾರ ಮಾಡಿದವರನ್ನು ಉತ್ತಮ ಗುಣದ ಪ್ರಾಣಿಗಳು ಮರತು ಬಿಡುವದಿಲ್ಲ; ನೋಡು ಮಗನೇ, ಎಂದು ಭೀಮನು ಹೇಳಿದನು.

40. Tin.

೪೦. ತವರ.

ತವರವು ಬೆಳ್ಳಿಯಂತೆ ಇರುತ್ತದೆ. ಅದು ನೀರಿಗಿಂತ ಏಳು ಪಾಲು ಜಡವಾದದ್ದು. ಅದು ಬಹಳ ಮೃದುವಾದದ್ದು. ಮಣಿಸಿ ಬಿಟ್ಟರೆ, ಹಾಗೆಯೇ ನಿಲ್ಲುತ್ತದೆ; ತಿರಿಗಿ ಮುಂಚೆ ಇದ್ದಂತೆ ಶೆಟೆದು ಕೊಂಡು ನಿಲ್ಲಲಾರದು. ತವರವು ಜರ್ಮನಿ ದೇಶದಲ್ಲಿಯೂ ವಿಲಾಯತಿಯಲ್ಲಿಯೂ ದೊರಿಯುತ್ತದೆ. ಅಮೇರಿಕ ಖಂಡದೊಳಗಿನ ಚಿಲ್ಲೀ ಮತ್ತು ಮೆಕ್ಸಿಕೋ ಎಂಬ ಹೆಸರುಗಳ ದೇಶಗಳಲ್ಲಿಯೂ ಹಿಂದುಸ್ಥಾನದ ಪೂರ್ವಕ್ಕಿರುವ ಮಲಕ್ಕಾ ಅಥವಾ ಮಲಾಯಾ ಎಂಬ ಹೆಸರಿನ ದ್ವೀಪಕಲ್ಪದಲ್ಲಿಯೂ ಅದರ ಖಣಿಗಳುಂಟು. ವಿಲಾಯತಿಯೊಳಗೆ ಇವೆಲ್ಲ ದೇಶಗಳಿಗಿಂತಲು ಹೆಚ್ಚು ತವರ ಆಗುತ್ತದೆ. ಅಲ್ಲಿಯ ಖಣಿಗಳು ಎರಡು ಸಾವಿರ ವರುಷಗಳಿಂದ ಪ್ರಸಿದ್ಧವಾಗಿವೆ.

ಖಣಿಯೊಳಗಿಂದ ಹೊರಟ ತವರದ ಕಲ್ಲುಗಳಿಂದ ತವರ ಮಾಡುವ ವಿಧವು ಹ್ಯಾಗಂದರೆ: ಮೊದಲು ಆ ಹೆಂಟೆಗಳನ್ನೆಲ್ಲ ಒಂದೇ ಸ್ಥಳದಲ್ಲಿ ಹಾಕಿ, ಒಡಿದು, ಪುಡಿ ಮಾಡಿ, ತೊಳಿದು, ಬಹಳ ಬೆಂಕಿಯೊಳಗೆ ಹಾಕಿ ಕಾಸುತ್ತಾರೆ. ಆದರಿಂದ ಅದರೊಳಗೆ ಕೂಡಿ ಕೊಂಡಿದ್ದ ಅನ್ಯ ಪದಾರ್ಥಗಳೆಲ್ಲ ನಾಶವಾಗಿ ಹೋಗುತ್ತವೆ. ತರುವಾಯ ಅದನ್ನು ಭಟ್ಟಿಯೊಳಗೆ ಹಾಕಿ, ಶುದ್ಧ ಮಾಡಿ, ಎರಕ ಹೊಯ್ದು, ಬೇಕ ಬೇಕಾದಷ್ಟು ಅಳತೆಯ ಪತ್ರಗಳನ್ನು ಮಾಡಿ ಕೊಳ್ಳುತ್ತಾರೆ.

41. The Belly and the Members.

೪೧. ಹೊಟ್ಟೆಯೂ ಅವಯವಗಳೂ.

ಒಂದಾನೊಂದು ಸಮಯದಲ್ಲಿ ಕೈ ಕಾಲು ಮುಂತಾದ ಅವಯವಗಳೆಲ್ಲ ಕೂಡಿ, "ನಾವು ಬಹಳ ಶ್ರಮ ಪಟ್ಟು ಫಳಿಸಿದ ಪದಾರ್ಥಗಳನ್ನು ಈ ಹೊಟ್ಟೆಯು ಏನೇನು ಕೆಲಸ ಮಾಡದೆ ಕೂತು ಕೊಂಡು ತಿನ್ನುತ್ತದೆ. ಇಂದಿನ ವರಿಗೂ ಆದದ್ದಾಯಿತು. ಆದರೆ ಇನ್ನು ಮೇಲೆ ಹೊಟ್ಟೆಯು ತಾನೇ ಉದ್ಯೋಗವನ್ನು ಮಾಡಿ, ಸಂಪಾದಿಸಿ ತಿನ್ನಲಿ, ಅದರ ಗೋಜು ನಮಗೆ ಎಳ್ಳಷ್ಟಾದರೂ ಬೇಡ" ಎಂದು ತಮ್ಮೊಳಗೆ ತಾವು ಮಾತಾಡಿ, ಆಣೆಗಳನ್ನು ಮಾಡಿ ಕೊಂಡಿದ್ದೇನಂದರೆ: ಕೈಯು, ನಾನು ಹೊಟ್ಟೆಯ ದೆಸೆಯಿಂದ ಕಷ್ಟ ಮಾಡಿದರೆ, ನನ್ನ ಬೊಟ್ಟುಗಳು ಬಿದ್ದು ಹೋಗಲಿ ಎಂದು ಹೇಳಿತು; ಬಾಯಿಯು, ನಾನೊಂದು ತುತ್ತು ತೆಗದು ಕೊಂಡರೆ, ನನ್ನಲ್ಲಿ ಹುಳಗಳು ಬೀಳಲಿ ಎಂದು ನುಡಿಯಿತು; ಹಲ್ಲುಗಳು, ನಾವು ತುತ್ತು ಮೆದ್ದರೆ, ಉದರಿ ಹೋಗಲಿ ಎಂದು ಅಂದವು. ಈ ಪ್ರಕಾರ ಎಲ್ಲವುಗಳು ಒಕ್ಕಟ್ಟಾಗಿ ಆಣೆ ಮಾಡಿ ಕೊಂಡು, ಏನೇನು ಕೆಲಸವಿಲ್ಲದೆ ಕೂತ ಮೇಲೆ, ಕೆಲವು ದಿವಸಗಳಲ್ಲಿ ಸರ್ವಾಯವಗಳು ಒಣಗಿ, ತೊಗಲು ಎಲುವುಗಳು ಮಾತ್ರವೇ ಉಳಿದವು. ಬಳಿಕ ಅವಯವಗಳಿಗೆ ತಿಳುವಳಿಕೆ ಉಂಟಾಗಿ, ನಾವು ಬುದ್ಧಿ ತಪ್ಪಿ ಕೆಟ್ಟ ಕೆಲಸ ಮಾಡಿದೆವು; ಹೊಟ್ಟೆಯ ಹೊರ್ತು ನಮಗೆ ಬೇರೆ ಆಧಾರವಿಲ್ಲ; ಹೊಟ್ಟೆಯು ತಾನು ಸ್ವತಃ ಉದ್ಯೋಗ ಮಾಡದಿದ್ದರೂ, ಅದನ್ನು ಬಿಟ್ಟರೆ ನಮ್ಮ ಪರಿಣಾಮವಿಲ್ಲವೆಂದು ಮಾತಾಡಿ ಕೊಂಡು, ತಮ್ಮ ತಮ್ಮ ಕೆಲಸಗಳಿಗೆ ಹತ್ತಿದವು.

42. Rama and Krishna.

೪೨. ರಾಮನೂ ಕೃಷ್ಣನೂ.

ಒಬ್ಬ ಗೃಹಸ್ಥನಿಗೆ ಇಬ್ಬರು ಮಕ್ಕಳು. ಅವರ ಹೆಸರು ರಾಮ, ಕೃಷ್ಣ. ರಾಮನು ಏಳು ವರ್ಷದವನಾಗಿದ್ದನು. ಕೃಷ್ಣನು ಐದು ವರ್ಷದವ

ನಾಗಿದ್ದನು. ಅವರಿಬ್ಬರೂ ಬಹು ಸುಶೀಲರಾಗಿದ್ದರು. ಒಂದಾನೊಂದು ದಿವಸ ಅವರಿಬ್ಬರು ಕೂಡಿ ಅಡ್ಡಾಡಲಿಕ್ಕೆ ಹೋಗುತಿರುವಾಗ್ಯೆ, ಒಂದು ಬೇಲಿಯೊಳಗೆ ಪಕ್ಷಿಯ ಗೂಡನ್ನು ಕಂಡರು. ಅದರಲ್ಲಿ ಹಿರೇ ಪಕ್ಷಿಯು ಮರಿಗಳಿಗೆ ಆಹಾರ ಕೊಡುತಿತ್ತು. ಅದು ಅವರನ್ನು ಕಾಣುತ್ತಲೆ ಹಾರಿ ಹೋಯಿತು. ಆ ಮೇಲೆ ಅವರು ಗೂಡಿನ ಹತ್ತರ ಹೋಗಿ ನೋಡ ಲಾಗಿ, ಮೂರು ಮರಿಗಳಿದ್ದವು. ಅವುಗಳನ್ನು ಮನೆಗೆ ತೆಗಿದು ಕೊಂಡು ಹೋಗ ಬೇಕೆಂದು ಕೃಷ್ಣನು ಅಂದನು. ಅದಕ್ಕೆ ರಾಮನು "ಹಾಗಲ್ಲ, ಮರಿಗಳನ್ನು ತಾಯಿಯಿಂದ ಅಗಲಿಸ ಬಾರದು, ಯಾತಕ್ಕಂದರೆ ನಮ್ಮ ತಂದೆ ತಾಯಿಗಳು ನಮಗೆ ಪ್ರೀತಿ ಮಾಡುವಂತೆ ಹಿರೇ ಪಕ್ಷಿಗಳು ತಮ್ಮ ಮರಿಗಳಿಗೆ ಪ್ರೀತಿ ಮಾಡುತ್ತವೆ. ನಮ್ಮನ್ನೂ ನಮ್ಮ ತಮ್ಮಂದಿರನ್ನೂ ತಂ ಗಿಯಂದಿರನ್ನೂ ಯಾವ ದುಷ್ಟ ಮನುಷ್ಯನಾದರು ಬಂದು, ಕದ್ದು ಕೊಂ ಡು ಹೋದರೆ, ನಮ್ಮ ತಂದೆ ತಾಯಿಗಳಿಗೆ ಹ್ಯಾಗೆ ದುಃಖವಾಗುವ ದೋ, ಹಾಗೆಯೇ ನಾವು ಆ ಮರಿಗಳನ್ನು ಕದ್ದು ಕೊಂಡು ಹೋದರೆ, ಹಿರೇ ಪಕ್ಷಿಗಳಿಗೆ ದುಃಖವಾಗುತ್ತದೆ" ಎಂದು ಹೇಳಲಾಗಿ, ಕೃಷ್ಣನು ಒಪ್ಪಿ ಕೊಂಡು, ತನ್ನ ಅಣ್ಣನ ಬುದ್ಧಿಯ ಮಾತುಗಳನ್ನು ಅಂಗೀಕರಿಸಿದನು.

ಇಬ್ಬರು ಅಣ್ಣ ತಮ್ಮಂದಿರು ಈ ಮಾತುಗಳನ್ನು ಆಡುತ್ತಿರುವಾಗ, ಅವರ ತಂದೆಯು ಬೇಲಿಯ ಆಚೆಗೆ ನಿಂತಿದ್ದನು. ಅವನು ಅಷ್ಟೆಲ್ಲ ಕೇಳಿ, ಬೇಲಿಯನ್ನು ದಾಟಿ ಬಂದು, ಮಕ್ಕಳನ್ನು ಅಪ್ಪಿ ಕೊಂಡು, "ಮಕ್ಕಳೇ, ನೀವು ಬಹು ಒಳ್ಳೇ ಹುಡುಗರು" ಎಂದು ಬಹಳವಾಗಿ ಕೊಂಡಾಡಿದನು.

43. Good Counsels.

೪೩. ಒಳ್ಳೇ ಉಪದೇಶ.

ಭಾಮಿನಿ.

ಸುಳ್ಳನಾಡಲಿ ಬೇಡ, ಜನರೊಳು
ಕಳ್ಳನೆನಿಸಲಿ ಬೇಡ, ನೀ ಮೈ
ಗಳ್ಳನಾಗಲಿ ಬೇಡ ಗುರುತಾಯ್ತುಂದೆಗಳ ನುಡಿಗೆ ॥

ಒಳ್ಳೆತನ ಬಿಡ ಬೇಡ, ಪ್ರಾಣಿಗ—
ಳಲ್ಲಿ ನಿರ್ದಯನಾಗ ಬೇಡತಿ
ಕ್ಷುಲ್ಲಕರ ಸಂಗದಲಿ ಮುಣುಗಲಿ ಬೇಡ ಕೆಡ ಬೇಡ; || ೧ ||
ಬಡವರಿಗೆ ಬಳಲಿಸಲಿ ಬೇಡೊಡ
ನುಡಿದ ಭಾಷೆಗೆ ತಪ್ಪ ಬೇಡತಿ
ನಡತೆಹೀನರ ಮಾತು ನಂಬಲಿ ಬೇಡ ಕಡಿ ತನಕಾ; ||
ಕೆಡಕು ಹಾದ್ಧಿಡಿ ಬೇಡ, ನೀ ಪರ—
ರೊಡವೆಗಾಶಿಯ ಮಾಡ ಬೇಡಡಿ—
ಗಡಿಗೆ ಸದ್ಗುಣಗಳನು ಬಿಟ್ಟಿರ ಬೇಡ ಕೆಡ ಬೇಡ. || ೨ ||

44. Letter from a Schoolboy to his Friend.

೪೪. ಹುಡುಗನು ತನ್ನ ಮಿತ್ರನಿಗೆ ಬರೆದ ಪತ್ರ.

ಪ್ರಿಯ ಮಿತ್ರರಾದ ಗೋಪಾಳರಾಯರಿಗೆ.—ನಮಸ್ಕಾರ ಮಾಡಿ ಬರ ಕೊಳ್ಳುವದು. ತದನಂತರ ನಾನು ಊರು ಬಿಟ್ಟು ಇಲ್ಲಿಗೆ ಬಂದಾಗಿನಿಂದ ನಿಮ್ಮ ಕಡಿಯಿಂದ ಒಂದಾದರೂ ಪತ್ರ ಬರಲಿಲ್ಲ. ಹೀಗೆ ಮಾಡದೆ ಮೇಲಿನ ಮೇಲೆ ಕಾಗದ ಬರಿದು ಕಳುಹಿಸಿ, ಸಮಾಚಾರ ತೆಗಿದು ಕೊಳ್ಳುತ್ತಿರ ಬೇಕು. ನಾನು ನಿಮ್ಮ ನಿರೂಪ ತೆಗದು ಕೊಂಡು ಇಲ್ಲಿಗೆ ಬಂದಾಗಿನಿಂದ ಇಂದಿನ ತನಕ ಸುಖರೂಪವಾಗಿದ್ಧೇನೆ. ಸಾಲಿಯಲ್ಲಿ ಅಭ್ಯಾಸ ನೆಟ್ಟಗೆ ನಡಿದದೆ. ನಮ್ಮ ಮೊದಲನೇ ಪುಸ್ತಕವು ತೀರಿ ಬಹಳ ದಿವಸಗಳಾದವು. ಈಗ ಎರಡನೇ ಪುಸ್ತಕ ಕಲಿಯುತ್ತಿದ್ಧೇನೆ. ಅದಾದರು ತೀರುತ್ತ ಬಂದದೆ. ಕೆಲವು ದಿವಸಗಳಲ್ಲಿ ಮೂರನೇ ಪುಸ್ತಕಕ್ಕೆ ಆರಂಭ ಮಾಡುವೆವು. ನೀವು ನನ್ನ ಸಂಗಡ ಹೊರಟು ಬಂದಿದ್ದರೆ, ಇಷ್ಟೆಲ್ಲ ಕಲಿಯುತ್ತಿದ್ದಿರಿ. ಅಲ್ಲಿ ಸುಮ್ಮನೆ ನಿಂತು ಕೊಂಡದ್ದು ದಡ್ಡತನವಾಯಿತು. ಈಗಾದರು ಹೊರಟು ಬಂದರು ಚಿಂತೆ ಇಲ್ಲ. ನಮ್ಮ ಅಯ್ಯನವರು ಬಹಳ ಒಳ್ಳೆವರಾಗಿದ್ಧಾರೆ. ಅವರು ನಮ್ಮಿಂದ ಚನ್ನಾಗಿ ವಿದ್ಯಾಭ್ಯಾಸ

ಮಾಡಿಸುತ್ತಾರೆ. ತೀವ್ರ ಹೊರಟು ಬರುವಂತೆ ಮಾಡ ಬೇಕು. ಉತ್ತರ ಬೇಗ ಕಳುಹಿಸ ಬೇಕು. ಇತಿ ನಮಸ್ಕಾರ.

45. The Lion.

೪೫. ಸಿಂಹ.



ಸಿಂಹವು ಬಹು ಬಲವುಳ್ಳದ್ದಾಗಿರುವದರಿಂದ, ಮೃಗರಾಜನೆನಿಸಿ ಕೊಳ್ಳುತ್ತದೆ. ಅದು ಸ್ವಲ್ಪ ಹೆಚ್ಚು ಕಡಿಮೆ ನಾಲ್ಕು ಮೊಳ ಉದ್ದ, ಎರಡು ಮೊಳ ಎತ್ತರ ಇರುತ್ತದೆ. ಅದರ ಕೊರಳಿನ ಕೂದಲವು ಕಣ್ಣಿಗೆ ಬಹು ಸಂಪಾಗಿದೆ. ಹೆಣ್ಣು ಸಿಂಹಕ್ಕೆ ಕೊರಳಲ್ಲಿ ಕೂದಲವಿಲ್ಲ. ಸಿಂಹವು ಒಂದೇ ಅಪ್ಪಳಿಕೆಯಿಂದ ಕುದುರೆಯನ್ನು ಕೊಂದು ಹಾಕುವದು. ಈ ದೇಶದೊಳಗಿನ ಸಿಂಹಗಳು ಹಳದಿ ಬಣ್ಣದವು; ಆದರೆ ಆಫ್ರಿಕ ಖಂಡದೊಳಗೆ ಕಪ್ಪು ಬಣ್ಣದವು ಉಂಟು. ಅದು ತನ್ನ ಕಣ್ಣು ಕಿಸಿದು, ಕೂದಲು ನಿಗರಿಸಿ, ಬಾಯಿ ತೆರೆದು, ಬಾಲವನ್ನು ಎತ್ತಿ ಗರ್ಜಿಸುತ್ತಿರುವಾಗ, ಮೇಘ ಗರ್ಜನೆಯೋ ಏನೋ ಎನಿಸುತ್ತದೆ. ಆನೆಯು ಇಷ್ಟು ದೊಡ್ಡದಾಗಿಯೂ ಬಲವುಳ್ಳದ್ದಾಗಿಯೂ ಇದ್ದರೂ, ಸಿಂಹವನ್ನು ಕಂಡ ಕೂಡ್ಲೆ ಅಂಜಿ ನಡುಗುತ್ತದೆ. ಸಿಂಹವು ಹಗಲೆಲ್ಲ ತನ್ನ ಗವಿಯಲ್ಲಿ ಬಿದ್ದು ಕೊಂಡಿದ್ದು, ರಾತ್ರಿ ಕಾಲಕ್ಕೆ ಬೇಟೆ ದೊರಕಿಸಲಿಕ್ಕೆ ಹೋಗುವದು. ಆಗ ಅದು ಗಿಡದ ಬುಡಕ್ಕೆ ಅಡಗಿ ಕೊಂಡಿದ್ದು, ತಾನು ಹಾರಿ ಹಿಡಿಯುವಷ್ಟು ಸಮೀಪ ಬೇಟೆ ಬಂದ ಕೂಡ್ಲೆ, ಜಿಗಿದು ಹಿಡಿಯುತ್ತದೆ. ಗುರಿ ತಪ್ಪಿದರೆ, ತಿರಿಗಿ ಅದನ್ನು

ಹಿಡಿಯುವದಕ್ಕೆ ಹೋಗದೆ, ಮತ್ತೊಂದು ಬೇಟೆಯು ಬರುವ ತನಕ ಜಪ್ಪಿಸಿ ಕೊಂಡು ಕೂಡ್ರುತ್ತದೆ. ಸಿಂಹವು ಒಂದು ಹಾರಿಕೆಗೆ ಹತ್ತು ಮೊಳ ಹೋಗುತ್ತದೆ. ಸಿಂಹವು ಇಷ್ಟು ಬಲವುಳ್ಳ ಪಶುವಾಗಿದ್ದರೂ, ಹಿಡಿದು ಸಾಕಿದರೆ ಈಲಾಗುತ್ತದೆ, ಮತ್ತು ಕಲಿಸಿದ ಆಟ ಕಲಿಯುತ್ತದೆ.

46. The Sandal-wood tree.

೪೬. ಗಂಧದ ಮರ.

ಗಂಧದ ಮರವು ಮಲಬಾರ ಪ್ರಾಂತದಲ್ಲಿಯೂ ಚೀನ ದೇಶದಲ್ಲಿಯೂ ಆಗುತ್ತದೆ. ಇನ್ನು ಕೆಲವು ದೇಶಗಳಲ್ಲಿ ಸಹ ಗಂಧದ ಮರಗಳು ಉಂಟು; ಆದರೆ ಅವುಗಳಿಂದ ಉಂಟಾಗುವ ಗಂಧವು ಅಷ್ಟು ಒಳ್ಳೇದಲ್ಲ. ಶ್ರೀಮಂತರು ಸುವಾಸನೆಗಾಗಿಯೂ ಚಂದಕ್ಕಾಗಿಯೂ ಶೋಭೆಗಾಗಿಯೂ ಗಂಧದ ಮರವನ್ನು ತೋಟಗಳಲ್ಲಿ ಹಚ್ಚುತ್ತಾರೆ. ಮರವು ಬಲಿತ ಮೇಲೆ ಅದನ್ನು ಕಡಿದು, ಚಿಕ್ಕ ಚಿಕ್ಕ ಕೊರಡು ಮಾಡಿ, ಭೂಮಿಯಲ್ಲಿ ಕೆಲವು ದಿವಸಗಳ ಪರಿಯಂತರ ಹೂಳಿಡುತ್ತಾರೆ. ಆ ಮೇಲೆ ಅವುಗಳನ್ನು ಹೊರಗೆ ತೆಗಿದು, ಕೆತ್ತಿ, ನೆಟ್ಟಗೆ ಮಾಡುತ್ತಾರೆ. ಬಣ್ಣವೂ ಭಾರವೂ ಹೆಚ್ಚೆಚ್ಚು ಇದ್ದಂತೆ ಕೊರಡಿನ ಬೆಲೆಯು ಹೆಚ್ಚುತ್ತದೆ. ಗಂಧದ ಗಿಡವು ಬಹು ಉಪಯೋಗವಾದದ್ದು. ಅಂಗಕ್ಕೆ ಧರಿಸಿ ಕೊಳ್ಳುವದಕ್ಕೆ ಕೊರಡು ತೇಯಿದು ಗಂಧ ಮಾಡುತ್ತಾರೆ, ಕುದಿಸಿ ಎಣ್ಣೆ ಮಾಡುತ್ತಾರೆ. ಗಂಧದ ಚಿಕ್ಕಿ ಬೆಂಕಿಯ ಮೇಲೆ ಹಾಕಿ ಸುಟ್ಟರೆ, ಬಹಳ ಸುವಾಸನೆ ಬರುತ್ತದೆ. ಬಿಸಲುಗಾಲದಲ್ಲಿ ಶ್ರೀಮಂತರು ತಂಪಿಗಾಗಿ ದೇಹಕ್ಕೆ ಗಂಧ ಲೇಪನ ಮಾಡಿ ಕೊಳ್ಳುತ್ತಾರೆ. ಗಂಧದ ಕಟ್ಟಿಗೆಯಿಂದ ಪೆಟ್ಟಿಗೆ, ಡಬ್ಬಿ, ಬೀಸಣಿಕೆ, ಗೊಂಬೆ ಮೊದಲಾದ ಅನೇಕ ಮನೋಹರವಾದ ಪದಾರ್ಥಗಳನ್ನು ಮಾಡುತ್ತಾರೆ.

ಗಂಧದ ಗಿಡದಿಂದ ಒಂದು ಬುದ್ಧಿಯ ಮಾತು ಕಲಿತು ಕೊಳ್ಳ ಬಹುದು; ಅದು ಯಾವದೆಂದರೆ, ಅನ್ಯರು ತಮಗೆ ಕೀಳು ಮಾಡಿದರೂ ತಾವು ಅವರಿಗೆ ಮೇಲು ಮಾಡ ಬೇಕು ಎಂಬುವದೇ. ಗಂಧದ ಗಿಡವ

ನ್ನು ಕಡಿದರೂ, ಅದು ತನ್ನನ್ನು ಕಡಿದವನಿಗೆ ಸುಗಂಧವನ್ನೇ ಬೀರುವದು ಹೊರ್ತಾಗಿ, ದುರ್ಗಂಧವನ್ನು ಕೊಡಲಾರದು.

47. Lead.

೪೭. ಸೀಸ.

ಸೀಸ ನೀರಿಗಿಂತ ಹನ್ನೊಂದು ಹನ್ನೆರಡು ಪಾಲು ಜಡವಾದದ್ದು. ಅದು ಶುದ್ಧ ವಾಗಿರುವಾಗ್ಯೆ ಸಪ್ಪಳ ಆಗುವದಿಲ್ಲ. ಅದು ಬಹಳ ಮೃದುವಾಗಿರುವದರಿಂದ ಉಗುರಿನಿಂದಾದರು ಅದರ ಮೇಲೆ ಗೆರೆ ಹೊಡಿಯಲಿಕ್ಕೆ ಬರುತ್ತದೆ. ಅದನ್ನು ಹಿಡಿದರೆ, ಕೈಗೆ ಕಪ್ಪು ಹತ್ತುತ್ತದೆ. ಅದು ಸಾಧಾರಣವಾಗಿ ಗಂಧಕ ಮತ್ತು ಬೆಳ್ಳಿ ಇವೆರಡರ ಸಂಗಡ ಕೂಡಿ ಕೊಂಡಿರುತ್ತದೆ. ವಿಲಾಯತಿಯಲ್ಲಿ ಬಹಳ ಸೀಸ ಹುಟ್ಟುತ್ತದೆ. ಅಲ್ಲಿಯ ಖಣಿಗಳು ಪೃಥ್ವಿಯೊಳಗಿನ ಎಲ್ಲ ಖಣಿಗಳೊಳಗೆ ದೊಡ್ಡವು. ಮೊದಲು ತವರು ಖಣಿಯೊಳಗಿಂದ ತೆಗಿದು, ತೊಳಿದು, ಹಸನ ಮಾಡಿ, ಹಲಗಿಯ ಮೇಲೆ ಹಾಕಿ, ಒಳ್ಳೆ ಹರಳುಗಳನ್ನು ಆರಿಸಿ ಕೊಂಡು, ಅವನ್ನು ಭಟ್ಟಿಯೊಳಗೆ ಹಾಕುತ್ತಾರೆ. ಅದರಿಂದ ಆ ಹರಳುಗಳೊಳಗೆ ಕೂಡಿ ಕೊಂಡಿದ್ದ ಗಂಧಕ ಮೊದಲಾದದ್ದೆಲ್ಲ ಸುಟ್ಟು ಹೋಗುತ್ತದೆ. ಆ ಮೇಲೆ ಇದ್ದಲಿ ಕೂಡಿಸಿ, ಅದನ್ನು ಶುದ್ಧ ಆಗುವದಕ್ಕಾಗಿ ಮತ್ತೊಂದು ಭಟ್ಟಿಯಲ್ಲಿ ಹಾಕುತ್ತಾರೆ; ಅದರೊಳಗೆ ಸೀಸ ಕರಗಿ, ತಳದಲ್ಲಿ ಬಂದು ನಿಂತಿರುತ್ತದೆ. ಅದು ಭಟ್ಟಿಯ ದ್ವಾರವು ತೆರಿದಾಕ್ಷಣಕ್ಕೆ ಬುಡಕ್ಕೆ ಇಟ್ಟಿರುವ ಒಂದು ದೊಡ್ಡ ತಪ್ಪಲಿಯೊಳಗೆ ಬಂದು ಬೀಳುತ್ತದೆ. ತರುವಾಯ ಅದರ ಮೇಲಿನ ಕಸರು ತೆಗಿದು ಹಾಕಿ, ಎರಕ ಹೊಯ್ದು, ಬೇಕ ಬೇಕಾದಷ್ಟು ತೂಕದ ಮುದ್ದಿಗಳನ್ನು ಮಾಡಿ ಕೊಳ್ಳುತ್ತಾರೆ. ಸೀಸ ಬಹಳ ಉಪಯುಕ್ತವಾದದ್ದು. ಜನರು ಸೀಸ ಪತ್ರಗಳನ್ನು ತಮ್ಮ ಮನೆಯ ಮೇಲೆ ಹಾಕುತ್ತಾರೆ. ಆದರೆ ಹಾಕದೆ ಇರುವದೇ ಉತ್ತಮ; ಯಾತಕ್ಕಂದರೆ, ಒಂದು ವೇಳೆ ಮನೆಗೆ ಬೆಂಕಿ ಹತ್ತಿದರೆ, ಸೀಸ ಕರಗಿ, ಹನಿಗಳು ಬಿದ್ದು, ಎಚ್ಚತ್ತು ಹೊರಗೆ ಹೋಗುವದರ ಒಳಗಾಗಿ ಕಾದ ಹನಿಗಳು ಬೀಳಲಾರಂಭಿಸುತ್ತವೆ. ದೂರಿನಿಂದ

ನೀರು ತೆಗಿದು ಕೊಂಡು ಬರ ಬೇಕಾದರೆ, ಸೀಸ ಕೊಳಿವೆಗಳನ್ನು ಉಪಯೋಗಿಸುತ್ತಾರೆ. ತೋಪಿನ ಗುಂಡುಗಳು ಸಹ ಸೀಸದಿಂದ ಆಗುತ್ತವೆ.

48. The Cat and the Fox.
೪೮. ಬೆಕ್ಕೂ ನರಿಯೂ.

ಒಂದು ದಿನ ಒಂದು ಬೆಕ್ಕೂ ಒಂದು ನರಿಯೂ ಈ ಪ್ರಕಾರ ಎರಡೂ ಒಂದು ಸ್ಥಳದಲ್ಲಿ ಕೂತು ಕೊಂಡು ಮಾತನಾಡುತ್ತಿರಲಾಗಿ, ನರಿಯು ಬೆಕ್ಕನ್ನು ನೋಡಿ, "ಎಲೇ ಬೆಕ್ಕೇ, ಏನಾದರೂ ಆಪತ್ತು ಬಂದರೆ, ಅದನ್ನು ತಪ್ಪಿಸಿ ಕೊಳ್ಳುವದಕ್ಕೆ ಎಷ್ಟು ಉಪಾಯಗಳನ್ನು ಬಲ್ಲಿ?" ಎಂದು ಕೇಳಿತು. ಅದಕ್ಕೆ ಬೆಕ್ಕು ತನಗೆ ಒಂದು ಉಪಾಯವು ಮಾತ್ರ ಗೊತ್ತು ಅದೆ, ಅದರಿಂದಲೇ ತಾನೆಂಥ ಆಪತ್ತು ಬಂದರೂ ತಪ್ಪಿಸಿ ಕೊಳ್ಳುತ್ತೇನೆಂದು ಹೇಳಲಾಗಿ, ನರಿಯು ನಕ್ಕು, "ನಿನಗೆ ಇಷ್ಟೇನೇ ತಿಳಿಯುವದು? ನನಗೆ ತಿಳಿದಷ್ಟು ಉಪಾಯಗಳು ನಿನಗೆ ತಿಳಿಯವು" ಎಂದು ಅಪಹಾಸ್ಯ ಮಾಡಿತು. ಹೀಗೆ ಅವೆರಡು ಇನ್ನೂ ಮಾತಾಡುತ್ತ ಕೂತಿರುವಾಗ, ಅತ್ತ ಕಡಿಯಿಂದ ಬೇಟೆಯ ನಾಯಿಗಳು ಓಡುತ್ತ ಬಂದವು. ಅವನ್ನು ನೋಡಿ, ಬೆಕ್ಕು ಗಿಡದ ಮೇಲೆ ಹತ್ತಿ, ಕೊಂಬೆಯ ಮೇಲೆ ಹೋಗಿ ಕೂತು ಕೊಂಡಿತು. ಆದರೆ ನರಿಯು ಅಂಜಿ, ಗಿಡವನ್ನು ಹತ್ತಲಾರದೆಯೂ ಬೇರೆ ಉಪಾಯವನ್ನು ಕಂಡು ಕೊಳ್ಳದೆಯೂ ಗದಗದ ನಡುಗಿ ಕೊಳ್ಳುತ್ತ ಇರುವಷ್ಟರೊಳಗೆ ಬೇಟೆಯ ನಾಯಿಗಳು ಬಂದು, ಹಿಡಿದು ಕೊಂದು ಬಿಟ್ಟವು. ಆದ ಕಾರಣ ಒಂದು ವಿದ್ಯೆಯಾದರೂ ಚನ್ನಾಗಿ ಕಲಿತವನು ಸುಖ ಪಡುವನು.

49. Loyalty.
೪೯. ಸ್ವರಾಜನಿಷ್ಠೆ.

ಸ್ವರಾಜನಿಷ್ಠೆಯಂದರೆ, ತಮ್ಮ ಅರಸನಿಗಾಗಲಿ ಆರಸಿಗಾಗಲಿ ಪ್ರಮಾಣಿಕತನದಿಂದ ಇರುವದು. ನಾವೆಲ್ಲರು ನಮ್ಮರಸಿಯಾದ ವಿಕ್ಟೋರಿಯಾ ಮಹಾರಾಣಿಯವರ ಸಂಗಡ ಪ್ರಮಾಣಿಕತನದಿಂದ ಇರ ಬೇಕು.

ಅವರ ಆಳಿಕೆಯ ಕೆಳಗೆ ನಾವೆಲ್ಲರು ಸುಖದಿಂದ ಇದ್ಧೇವೆ. ಅವರಿಗೆ ಮೇಲು ಬಯಸುವದು ನಮ್ಮ ಧರ್ಮ.

ದೇಶದಲ್ಲಿ ಬಂಡಾಯಿ ಎಬ್ಬಿಸುವದು ಕೆಟ್ಟ ಕೆಲಸ. ಅದರಿಂದ ಎಷ್ಟೋ ಜನರು ಸಾಯುತ್ತಾರೆ; ಲೋಹಮಾರ್ಗ ಮಾಡುವದು, ಕೆರೆ ಕಟ್ಟುವದು ಮೊದಲಾದ ಲೋಕೋಪಕಾರದ ಕೃತ್ಯಗಳಿಗೆ ಅಡ್ಡಿ ಸಂಭವಿಸುತ್ತದೆ.

ಮುಂದೆ ಬರೆದ ಕವಿತ್ವವು ಸ್ವರಾಜನಿಷ್ಠೆಯ ಸಂಬಂಧದ್ದಾಗಿದೆ. ಅದನ್ನು ಪ್ರತಿ ಒಬ್ಬೊಬ್ಬ ಹುಡುಗನು ಕಲಿಯ ಬೇಕು. ಅದು ಎಷ್ಟೋ ವರ್ಷಗಳ ಹಿಂದೆ ಇಂಗ್ಲಂದ ದೇಶದ ಅರಸನಾದ ಜೇಮ್ಸ ಮಹಾರಾಜನ ಮೇಲೆ ಕ್ಯಾರಿ ಎಂಬ ಹೆಸರಿನ ಒಬ್ಬ ಕವಿಯಿಂದ ಬರೆಯಲ್ಪಟ್ಟಿತ್ತು. ಆ ಅರಸನು ಮರಣ ಹೊಂದಿದ ಬಳಿಕ ಜ್ಯಾರ್ಜ ರಾಜನಾದನು. ಅವನು ಇರುವ ತನಕ ಅದು ಅವನ ಹೆಸರಿಲೆ ಹಾಡಲ್ಪಟ್ಟಿತು. ಅವನು ತೀರಿ ಹೋದ ಬಳಿಕ ಅರಸರಾದವರ ಹೆಸರು ಹಾಕ್ದಾಕಿ, ಹಾಡಲ್ಪಟ್ಟಿತು. ಈ ಪ್ರಕಾರ ಅದು ಈ ದಿವಸದ ವರಿಗೆ ನಡಿಯುತ್ತ ಬಂದದೆ.

50. The National Anthem.

(God save the Queen.)

೫೦. ಪ್ರಜೆಗಳ ಹಾಡು.

(ದೇವರು ರಾಣಿಯನ್ನು ರಕ್ಷಿಸಲಿ ಎಂಬುವದು.)



ಭಾಮಿನಿ.

ದೇವ ರಕ್ಷಿಸು ನಿರುತದಲಿ ಜಗ—
ಜೀವಲಯವನು ಸತ್ಕರುಣದಲಿ
ಕಾವ ಕರುಣಾಕರನೆ ರಕ್ಷಿಸು ನಮ್ಮ ರಾಣಿಯನು ||

ಸಾವಧಾನದಿ ರಾಜ್ಯವಾಳಿಸು--
ತಾವಗಂ ಜಯ ಸುಖ ಸುಕೀರ್ತಿಗ—
ಳೀವುತಿಂಗ್ಲಂದದ ಸುರಾಣಿಯ ರಕ್ಷಿಸನುದಿನದಿ || ೧ ||

ಜಡಿದು ಬಿಡುವದು ನಮ್ಮರಸಿಯೊಳ್
ಕೆಡಕು ಬಯಸುವ ಪಗೆಯರನು ಮ—
ತ್ತಡಿಗಡಿಗವರು ಮಾಡುತಿಹ ದುರ್ಯುಕ್ತಿಗಳನೆಲ್ಲ ||
ತಡವಿ ನಿಷ್ಫಲ ಮಾಡು ಗೊಂದಲ
ಪಡಿಸವರ ರಾಜ್ಯದಲಿ ಸಲೆ ನಿಂ—
ನಡಿಗೆ ನಂಬಿದೆವಾವು ರಕ್ಷಿಸು ರಕ್ಷಿಸನುದಿನದಿ || ೨ ||

ಆ ಸುಹೃದಯದ ರಾಣಿ ನಮ್ಮಯ
ದೇಶವಾಳಲಿ ಬಹು ದಿವಸವೆಂ—
ಬಾಶೆಯತಿಶಯ ನಿನ್ನಡಿಗೆ ಶೇರಿಸಿದೆವಾವಿನ್ನು ||
ಈ ಸಮಸ್ತವ ನಿರ್ಮಿಸಿದ ಜಗ—
ದೀಶ ನಿನ್ನಯ ಬಳಿಗಿರುವ ನಾ—
ನಾಸುವಸ್ತುಗಳಿತ್ತು ರಾಣಿಯ ರಕ್ಷಿಸನುದಿನದಿ || ೩ ||

ಪರಮ ಹಿತಕರ ಕಟ್ಟಳೆಗಳನು
ವಿರಚಿಸುತ, ನಾವೆಲ್ಲರಂತಃ—
ಕರಣದಲಿಯಾನಂದದಲಿ ಕೊಂಡಾಡುತಿರುವಂತೆ ||
ನೆರೆ ಸುಕೃತಿಗಳ ಮಾಡಿ ಪ್ರಜರನು
ಪೊರೆಯ ಬೇಕೆಂಬುವ ಸುಬುದ್ಧಿಯ—
ನರಸಿಗಿತ್ತವರನ್ನು ಕರುಣದಿ ರಕ್ಷಿಸನುದಿನದಿ. || ೪ ||

ಸಂಪೂರ್ಣ.



2

SECOND

BOOK OF LESSONS

IN CANARESE

ಬಾಲಕರ ಕನ್ನಡ ಪಾಠಗಳ

ಎರಡನೇ

ಪುಸ್ತಕವು

FOR THE USE OF GOVERNMENT CANARESE SCHOOLS IN THE SOUTHERN DIVISION OF THE BOMBAY PRESIDENCY

FOURTH EDITION, REVISED

MANGALORE
PRINTED FOR THE EDUCATIONAL DEPARTMENT
BY STOLZ & REUTHER, BASEL MISSION PRESS
1868